# ವಿದ್ಯಾಕಾಶಿ ಮಾಡುವತ್ತ ಧಾರವಾಡ ಜಿಲ್ಲಾಡಳಿತದ ಚಿತ್ತ



**ಧಾರವಾಡ :** ವಿದ್ಯಾಕಾಶಿ ಎಂದೇ ಕರೆಸಿಕೊಳ್ಳುವ ಧಾರವಾಡ ಜಿಲ್ಲೆಯನ್ನು ಎಸ್.ಎಸ್.ಎಲ್.ಸಿ ಫಲಿತಾಂಶದಲ್ಲಿ ರಾಜ್ಯಕ್ಕೆ ನಂಬರ ಒನ್ ಸ್ಥಾನಕ್ಕೆ ತರುವ ಮೂಲಕ ಹೆಸರಿಗೆ ತಕ್ಕಂತೆ ವಿದ್ಯಾಕಾಶಿ ಮಾಡುವ ಪ್ರಯತ್ನವನ್ನು ಜಿಲ್ಲಾಡಳಿತ ಆರಂಭಿಸಿದೆ. ಇದಕ್ಕೆ ಶಿಕ್ಷಣ ಇಲಾಖೆ ಅಧಿಕಾರಿಗಳು, ಶಿಕ್ಷಣ ತಜ್ಞರು, ಪರೀಕ್ಷಾ ತರಬೇತಿ ಸಂಸ್ಥೆಗಳು ಮತ್ತು ಸಾರ್ವಜನಿಕರು ಕೈ ಜೊಡಿಸಿದ್ದು, ಎಲ್ಲರ ಸಹಕಾರ, ಪ್ರಯತ್ನದಿಂದ ಗುರಿ ಸಾಧಿಸುವ ವಿಶ್ವಾಸವಿದೆ ಎಂದು ಜಿಲ್ಲಾಧಿಕಾರಿ ದಿವ್ಯ ಪ್ರಭು ಅವರು ಹೇಳಿದರು.

ಅವರು ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ವಿದ್ಯಾಕಾಶಿ ಮಾಡುವತ್ತ ಧಾರವಾಡ ಜಿಲ್ಲಾಡಳಿತದ ಚಿತ್ತ ಎಂಬ ಸಂಕಲ್ಪದೊಂದಿಗೆ ಧಾರವಾಡದ ಹಿರಿಯ ಶಿಕ್ಷಣ ತಜ್ಞರು, ಖಾಸಗಿ ತರಬೇತಿ ಸಂಸ್ಥೆಗಳ ಮುಖ್ಯಸ್ಥರು, ಜಿಲ್ಲಾ ಶೈಕ್ಷಣಿಕ ತರಬೇತಿ ಸಂಸ್ಥೆ ಹಾಗೂ ಶಾಲಾ ಶಿಕ್ಷಣ ಇಲಾಖೆ ಅಧಿಕಾರಿಗಳೊಂದಿಗೆ ಪ್ರಸಕ್ತ ಸಾಲಿನ ಎಸ್. ಎಸ್.ಎಲ್.ಸಿ ಪರೀಕ್ಷೆ ಫಲಿತಾಂಶ ಕುರಿತು ಸಮಾಲೋಚನೆ ಹಾಗೂ ಕ್ರಿಯಾಯೋಜನೆ ರೂಪಿಸುವದಕ್ಕಾಗಿ ಜರುಗಿದ ಸಭೆಯ ಅಧ್ಯಕ್ಷತೆ ವಹಿಸಿ, ಮಾತನಾಡಿದರು.

ಕಳೆದ ವರ್ಷದ ಹತ್ತನೇ ತರಗತಿ ಪರೀಕ್ಷೆಯಲ್ಲಿ ಶೇ. 72.67 ರಷ್ಟು ಸಾಧನೆ ಮಾಡುವ ಮೂಲಕ ಧಾರವಾಡ ಜಿಲ್ಲೆ 22ನೇ ಸ್ಥಾನ ಪಡೆದಿದೆ. ಜಿಲ್ಲೆಯ 495 ಪ್ರೌಢಶಾಲೆಗಳ ಪೈಕಿ ಮೂರು ಶಾಲೆಗಳು ಶೂನ್ಯ ಸಂಪಾದನೆ ಮಾಡಿದ್ದು, 30 ಶಾಲೆಗಳು ಶೇ. 100 ರಷ್ಟು ಸಾಧನೆ ಮಾಡಿವೆ ಎಂದು ಅವರು ಹೇಳಿದರು.

ಇಲ್ಲಿಯವರೆಗೆ ಸರಕಾರಿ, ಅನುದಾನಿತ ಮತ್ತು ಅನುದಾನ ರಹಿತ ಪ್ರೌಢಶಾಲೆಗಳು ಸೇರಿ ಪ್ರಸಕ್ತ ವರ್ಷ ಒಟ್ಟು 32,870 ವಿದ್ಯಾರ್ಥಿಗಳು ಹತ್ತನೇ ವರ್ಗಕ್ಕೆ ಪ್ರವೇಶ ಪಡೆದಿದ್ದಾರೆ ಮತ್ತು 8ನೇ ವರ್ಗಕ್ಕೆ 33,494, 9ನೇ ವರ್ಗಕ್ಕೆ 33,218 ಮಕ್ಕಳು ಸೇರಿ ಪ್ರೌಢಶಾಲೆಗಳಿಗೆ ಒಟ್ಟು 99,582 ಮಕ್ಕಳು ಇಲ್ಲಿವರೆಗೆ ಪ್ರವೇಶ ಪಡೆದಿದ್ದಾರೆ ಎಂದು ಜಿಲ್ಲಾಧಿಕಾರಿಗಳು ತಿಳಿಸಿದರು.

ಪ್ರಸಕ್ತ ವರ್ಷ 10 ನೇ ತರಗತಿಗೆ ದಾಖಲಾಗಿರುವ ಮಕ್ಕಳಲ್ಲಿನ ಕಲಿಕೆಯ ಗತಿಯನ್ನು ಗುರುತಿಸಲು ಸೇತು ಬಂಧು ಕಾರ್ಯಕ್ರಮದಡಿ ಪರೀಕ್ಷೆಯನ್ನು ಜರುಗಿಸಲಾಗಿತ್ತು. ಒಟ್ಟು ಹತ್ತನೇ ವರ್ಗದ ಮಕ್ಕಳ ಪೈಕಿ 8,237 ವಿದ್ಯಾರ್ಥಿಗಳು ಕಲಿಕೆಯಲ್ಲಿ ನಿಧಾನಗತಿಯಲ್ಲಿದ್ದು, ಹಿಂದುಳಿದಿದ್ದಾರೆ.

ಕಲಿಕೆಯಲ್ಲಿ ಹಿಂದುಳಿದ ಮಕ್ಕಳಿಗೆ ಸರಿಯಾದ ಶಿಕ್ಷಣ ನೀಡಿ, ಅವರನ್ನು ಸಾಮಾನ್ಯ ವಿದ್ಯಾರ್ಥಿಗಳಂತೆ ಸುಧಾರಿಸಿ ಈ ಸಲದ ಪರೀಕ್ಷೆಯಲ್ಲಿ ಉತ್ತೀರ್ಣರಾಗುವಂತೆ ಮಾಡುವ ಚಾಲೆಂಜ್ ನಮ್ಮ ಮುಂದಿದೆ. ಈ ನಿಟ್ಟಿನಲ್ಲಿ ಸಾರ್ವಜನಿಕರು, ಪರಿಣಿತರು, ಶಾಲಾ ಅಭಿವೃದ್ಧಿ ಸಮಿತಿಯವರ ಸಹಕಾರ ಅಗತ್ಯವಿದೆ ಎಂದು ಜಿಲ್ಲಾಧಿಕಾರಿ ದಿವ್ಯ ಪ್ರಭು ಅವರು ತಿಳಿಸಿದರು.

ಮಕ್ಕಳಲ್ಲಿ ಓದುವ ಭರವಸೆ ಮೂಡಿಸುವ ಅಗತ್ಯವಿದೆ. ಓದಿನಲ್ಲಿ ಮಕ್ಕಳು ಹಿಂದುಳಿಯಲು ಶಿಕ್ಷಕರು ಮಾತ್ರ ಕಾರಣರಲ್ಲ, ಅದರ ಹೊಣೆಯನ್ನು ಪಾಲಕರು ಸೇರಿದಂತೆ ಎಲ್ಲರೂ ವಹಿಸಿಕೊಳ್ಳಬೇಕು. ಮಕ್ಕಳಿಗೆ ಒಳ್ಳೆಯ ಶಿಕ್ಷಣ ನೀಡುವುದು, ಅವರ ಉತ್ತಮ ಭವಿಷ್ಯ ರೂಪಿಸುವುದು ನಮ್ಮೆಲ್ಲರ ಜವಾಬ್ದಾರಿ ಆಗಿದೆ ಎಂದು ಅವರು ಹೇಳಿದರು.

ಪ್ರತಿ ಮಗು ಶಾಲೆಯಲ್ಲಿರಬೇಕು. ಈ ಕುರಿತು ಶಿಕ್ಷಣ ಇಲಾಖೆ ಹಲವಾರು ಕಾರ್ಯಕ್ರಮಗಳನ್ನು ರೂಪಿಸಿದೆ. ಮಕ್ಕಳು ಶಾಲೆಗೆ ದಾಖಲಾಗಿಯೂ ಕ್ಲಾಸ್‌ಗೆ ಬರದಿದ್ದರೆ ಶಿಕ್ಷಕರನ್ನು ಮತ್ತು ಶಾಲಾ ಮುಖ್ಯಸ್ಥರನ್ನು ಹೊಣೆಗಾರರನ್ನಾಗಿ ಮಾಡಲಾಗುತ್ತದೆ. ಪ್ರತಿ ವಿದ್ಯಾರ್ಥಿಯ ಕಲಿಕೆಯ ಜವಾಬ್ದಾರಿಯನ್ನು ಶಿಕ್ಷಕರು ನಿರ್ವಹಿಸಬೇಕೆಂದು ಅವರು ತಿಳಿಸಿದರು.

ಕಲಿಕೆಯಲ್ಲಿ ನಿಧಾನಗತಿಯಲ್ಲಿರುವ ಮಕ್ಕಳನ್ನು ಗುರುತಿಸಿ ಎರಡ ಮೂರು ಜನರಿಗೆ ಒರ್ವ ಶಿಕ್ಷಕರನ್ನು ಮತ್ತು ಅಂತಹ ಒಂದು ಶಾಲೆಗೆ ಒರ್ವ ನೊಡಲ್ ಅಧಿಕಾರಿಯನ್ನು ನೇಮಿಸಲು ಕ್ರಮವಹಿಸಲಾಗುತ್ತದೆ ಎಂದು ಜಿಲ್ಲಾಧಿಕಾರಿಗಳು ತಿಳಿಸಿದರು.

ಬೆಸ್ಟ ಟೀಚರ್ ಪುರಸ್ಕಾರ: ನಿಧಾನಗತಿಯ ಮಕ್ಕಳಲ್ಲಿನ ಓದು ಬರಹದಲ್ಲಿ ಬದಲಾವಣೆ ತರುವ, ಉತ್ತಮ ಪ್ರಗತಿ ಸಾಧಿಸುವ ಶಿಕ್ಷಕರಿಗೆ ಬೆಸ್ಟ್ ಟೀಚರ್ ಪುರಸ್ಕಾರ ನೀಡಿ, ಜಿಲ್ಲಾಡಳಿತದಿಂದ ಗೌರವಿಸಲಾಗುವುದು ಎಂದು ಜಿಲ್ಲಾಧಿಕಾರಿಗಳು ತಿಳಿಸಿದರು.

# ಎನ್‌ಎಂಎಂಎಸ್ ಪರೀಕ್ಷೆ: ತೇರ್ಗಡೆ ವಿದ್ಯಾರ್ಥಿಗಳಿಗೆ ಸನ್ಮಾನ



**ವಿಜಯಪುರ :** ಎನ್‌ಎಂಎಂಎಸ್ ಪರೀಕ್ಷೆಯಲ್ಲಿ ಪಾಸಾಗಿ ಸ್ಕಾಲರ್ಶಿಪ್‌ಗೆ ಆಯ್ಕೆಯಾದ ಬಬಲೇಶ್ವರ ತಾಲೂಕಿನ ಅರ್ಜುಣಗಿ ಕರ್ನಾಟಕ ಪಬ್ಲಿಕ್ ಶಾಲೆಯ 4 ವಿದ್ಯಾರ್ಥಿಗಳನ್ನು ಇನ್ನರ್ ವ್ಹೀಲ್ ಕ್ಲಬ್ ಆಫ್ ಬಿಜಾಪುರ ಹಾಗೂ ಕೆಪಿಎಸ್ ಅರ್ಜುಣಗಿ ಶಾಲೆ ವತಿಯಿಂದ ಸನ್ಮಾನಿಸಲಾಯಿತು.

ಕೆಪಿಎಸ್ ಅರ್ಜುಣಗಿಯಲ್ಲಿ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಪರೀಕ್ಷೆಯಲ್ಲಿ ಪಾಸಾದ ರಕ್ಷಾ ನಾವಿ, ಪ್ರೀತಿ ಬಡಿಗೇರ, ಪೂಜಾ ಪಡಸಲಗಿ ಹಾಗೂ ಶಿಲ್ಪಾ ಒಡೆಯರ ಸೇರಿದಂತೆ 4 ವಿದ್ಯಾರ್ಥಿಗಳಿಗೆ ಸನ್ಮಾನಿಸಿ ಪ್ರಮಾಣ ಪತ್ರ ನೀಡಲಾಯಿತು.

ಕಾರ್ಯಕ್ರಮದಲ್ಲಿ ಇನ್ನರ್ ವ್ಹೀಲ್ ಕ್ಲಬ್ ಆಫ್ ಬಿಜಾಪುರ ಅಧ್ಯಕ್ಷೆ ನಿರ್ಮಲಾ ದೊಡಮನಿ, ಶಾಲೆಯ ಉಪ ಪ್ರಾಚಾರ್ಯ ಎ.ಎಸ್.ಬಿರಾದಾರ, ವನಿತಾ ಭೈರವಾಡಗಿ, ಸಾವಿತ್ರಿ ನಾಟಿಕಾರ, ವನಜಾಕ್ಷಿ ಬಡಿಗೇರ, ರಮೇಶ ಕುಂಬಾರ, ಈರಣ್ಣ ಚಿಪಾಟಿ, ಜಿ.ಕೆ. ಸಾಸಟ್ಟಿ ಸೇರಿದಂತೆ ಇತರರು ಉಪಸ್ಥಿತರಿದ್ದರು ಎಂದು ಉಪ ಪ್ರಾಚಾರ್ಯರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# 2ಎ ಮೀಸಲಾತಿಗಾಗಿ ಕಾನೂನು ಹೋರಾಟ: ಬಸವಜಯ ಮೃತ್ಯುಂಜಯ ಸ್ವಾಮೀಜಿ



**ಹುಬ್ಬಳ್ಳಿ :** ಲಿಂಗಾಯತ ಪಂಚಮಸಾಲಿ ಸಮಾಜಕ್ಕೆ 2ಎ ಮೀಸಲಾತಿ ಮತ್ತು ಎಲ್ಲ ಲಿಂಗಾಯತ ಉಪಪಂಗಡಗಳಿಗೆ ಕೇಂದ್ರ ಸರ್ಕಾರದ ಒಬಿಸಿ ಮೀಸಲಾತಿಗಾಗಿ ಕಾನೂನಾತ್ಮಕ ಹೋರಾಟ ನಡೆಸಲು ಬೆಂಗಳೂರಿನಲ್ಲಿ ಜುಲೈ 23ರಂದು ಸಮಾಜದ ವಕೀಲರ ರಾಜ್ಯಮಟ್ಟದ ಸಭೆ ಕರೆಯಲಾಗಿದೆ ಎಂದು ಕೂಡಲಸಂಗಮದ ಬಸವಜಯ ಮೃತ್ಯುಂಜಯ ಸ್ವಾಮೀಜಿ ಹೇಳಿದರು.

ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮೀಸಲಾತಿಗಾಗಿ ಈಗ ಏಳನೇ ಹಂತದ ಪತ್ರ ಚಳವಳಿ ನಡೆಸಲಾಗುತ್ತಿದೆ. ಮುಂದಿನ ಹಂತದಲ್ಲಿ ಕಾನೂನು ಹೋರಾಟಕ್ಕೆ ಸಮಾಜದ ಹಿರಿಯ ವಕೀಲರ ತಂಡ ರಚನೆ ಮಾಡಲಾಗುವುದು ಎಂದರು.

ಸಭೆಯ ಬಳಿಕ ಶಾಶ್ವತ ಹಿಂದುಳಿದ ವರ್ಗಗಳ ಆಯೋಗ, ಮುಖ್ಯಮಂತ್ರಿ, ಕಾನೂನು ಸಚಿವರಿಗೆ ಮನವಿ ಸಲ್ಲಿಸಲಾಗುವುದು. ಅಲ್ಲದೆ, ಜಿಲ್ಲಾ, ತಾಲ್ಲೂಕು ಮಟ್ಟದದಲ್ಲಿ ವಕೀಲರ ಸಂಘದ ಮೂಲಕ ಹೋರಾಟ ನಡೆಸಲಾಗುವುದು ಎಂದು ತಿಳಿಸಿದರು.

ವಿವಿಧ ಪಕ್ಷಗಳಲ್ಲಿ ಲಿಂಗಾಯತ ಪಂಚಮಸಾಲಿ ಸಮಾಜದ 20 ಶಾಸಕರಿದ್ದಾರೆ. ಎಲ್ಲರೂ ಈ ಅಧಿವೇಶನದಲ್ಲಿ ಮೀಸಲಾತಿಗಾಗಿ ಧ್ವನಿ ಎತ್ತಬೇಕು. ಆ ಮೂಲಕ ಸಮಾಜದ ಋಣ ತೀರಿಸಬೇಕು. ಸಮಾಜದ ಶಾಸಕರುಗೆಲ್ಲಲು ಮೀಸಲಾತಿ ಹೋರಾಟವೂ ಕಾರಣ. ಹೋರಾಟಕ್ಕೆ ಸಮಾಜದ ಶಾಸಕರು ಬೆಂಬಲ ನೀಡದೆ, ಅಸಹಕಾರ ತೋರಿದರೆ ಸಮಾಜದ ನಂಬಿಕೆ ಕಳೆದುಕೊಳ್ಳಬೇಕಾಗುತ್ತದೆ ಎಂದರು ಎಂದು ಹೇಳಿದರು.

ಲೋಕಸಭೆ ಚುನಾವಣೆ ಬಳಿಕ ಕಾನೂನು ತಜ್ಞರ ಸಭೆ ಕರೆದು ಮುಂದಿನ ನಿರ್ಣಯ ಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ, ಕಾನೂನು ಸಚಿವ ಎಚ್.ಕೆ.ಪಾಟೀಲ ಭರವಸೆ ನೀಡಿದ್ದರು. ಚುನಾವಣೆ ಮುಗಿದು ಒಂದು ತಿಂಗಳು ಕಳೆದರೂ ನಿರ್ಲಕ್ಷ್ಯ ವಹಿಸಿದ್ದಾರೆ ಎಂದು ದೂರಿದರು.

ಈ ಹಿಂದೆ ಹೋರಾಟ ನಡೆಸಿದಾಗ ಸಮಾಜದ ವಕೀಲರು ಪರೋಕ್ಷವಾಗಿ ಬೆಂಬಲ ನೀಡುತ್ತಿದ್ದರು. ಈಗ ವಕೀಲರ ಸಭೆ ಕರೆದು ಅವರ ಬೆಂಬಲ ಕೋರಲಾಗಿದ್ದು, ಹೋರಾಟಕ್ಕೆ ಬೆಂಬಲ ಸೂಚಿಸಿದ್ದಾರೆ ಎಂದು ಹೇಳಿದರು.

ಗುರುವಾರ ನಡೆದ ವಕೀಲರ ಸಭೆಯಲ್ಲಿ ಮೀಸಲಾತಿ ಹೋರಾಟಕ್ಕಾಗಿ ಬೆಂಗಳೂರಿನಲ್ಲಿ ಸಭೆ ನಡೆಸುವುದು, ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ವಕೀಲರ ಸಂಘಟನೆ ಮಾಡುವುದು, ಕಾನೂನಾತ್ಮಕ ಹೋರಾಟಕ್ಕೆ ವಕೀಲರ ತಂಡ ರಚನೆ ಮಾಡಬೇಕು ಎಂಬ ನಿರ್ಣಯ ಕೈಗೊಳ್ಳಲಾಗಿದೆ ಎಂದರು.

ಜುಲೈ 21ರಂದು ಬೆಂಗಳೂರಿನಲ್ಲಿ ಸಮಾಜದ ಪಂಚಸೇನೆಯ ಉದ್ಘಾಟನೆ, ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮ ನಡೆಯಲಿದೆ. ಕಾರ್ಯಕ್ರಮ ನಡೆಯುವ ಸ್ಥಳವನ್ನು ಶೀಘ್ರದಲ್ಲಿಯೇ ನಿಗದಿ ಮಾಡಲಾಗುವುದು ಎಂದು ತಿಳಿಸಿದರು.

ಲಿಂಗಾಯತ ಸಮಾಜದ ಉಳಿದ ಒಳಪಂಗಡಗಳಿಗೆ ಮೀಸಲಾತಿ ನೀಡಿದರೂ ನಮ್ಮ ಬೆಂಬಲ ಇದೆ. ಮಹರಾಷ್ಟ್ರದಲ್ಲಿ ಮರಾಠ ಮೀಸಲಾತಿಗಾಗಿ ಆ ಸಮಾಜದವರು 10 ವರ್ಷ ಹೋರಾಟ ನಡೆಸಿದರು. ನಮಗೂ ನ್ಯಾಯ ಸಿಗುವ ವಿಶ್ವಾಸ ಇದೆ ಎಂದರು.

ಆರ್.ಜಿ. ಕೊಡ್ಲಿ, ಎ.ವಿ.ಬಳಿಗಾರ್, ಹನುಮಂತ ಶಿಗ್ಗಾವಿ, ಎಸ್.ಎಸ್.ನಾಗನಗೌಡ್ರ, ಬಾಪುಗೌಡ ಶಾಬಾಳದ, ವೈ.ಬಿ.ಮುದಿಗೌಡ್ರ, ಸಾವಿತ್ರಿ ಪೊಲೀಸಗೌಡ್ರ, ವಿದ್ಯಾ ಪಾಟೀಲ, ಪೂಜಾ ಸವದತ್ತಿ, ಸಾವಿತ್ರಿ ಅನಾಮಿ, ಸಿ.ವಿ.ಹೊಂಬಾಳ, ಸುಜಾತಾ ಗೋವನಕೊಪ್ಪ, ವಿ.ಟಿ.ಕುಲಕರ್ಣಿ. ಜಿ.ಆರ್.ಪಾಟೀಲ, ಎಸ್.ಎಸ್.ಕೋಟಗಿ, ಜಿ.ಎಫ್.ಸಂಕಣ್ಣವರ, ವಿಜಯಲಕ್ಷ್ಮಿ ವಾಲಿ, ಪಿ.ಎಸ್. ನರೇಗಲ್ ಸೇರಿದಂತೆ ಉತ್ತರ ಕರ್ನಾಟಕ ಭಾಗದ ಪಂಚಮಸಾಲಿ ಸಮಾಜದ 250ಕ್ಕೂ ಹೆಚ್ಚು ವಕೀಲರು ಭಾಗವಹಿಸಿದ್ದರು.

# ರಮಣೀಯವಾಗಿ ಕಾಣುತ್ತಿರುವ ಆಲಮಟ್ಟಿ ಆಣೆಕಟ್ಟೆ



**ವಿಜಯಪುರ :** ಆಲಮಟ್ಟಿ ಅಣೆಕಟ್ಟೆಗೆ ಒಳ ಹರಿವು ದಿನೇ ದಿನೇ ಹೆಚ್ಚುತ್ತಿದ್ದು, ಭಾರಿ ಪ್ರಮಾಣದ ನೀರು ಹರಿದು ಬರುತ್ತಿದೆ.

ಪಶ್ಚಿಮ ಘಟ್ಟದಲ್ಲಿ ಧಾರಾಕಾರವಾಗಿ ಮಳೆ ಸುರಿಯುತ್ತಿದೆ. ಸದ್ಯಕ್ಕೆ 40,000ಕ್ಯೂಸೆಕ್ ನೀರು ಹರಿದು ಬರುತ್ತಿದೆ. ಇದರಿಂದ ನೀರಿನ ಪ್ರಮಾಣ ಅಧಿಕವಾಗಿ ಅಣೆಕಟ್ಟೆ ಭರ್ತಿಯಾಗಿ ರಮಣೀಯವಾಗಿ ಕಾಣುತ್ತಿದೆ. ಅಣೆಕಟ್ಟೆಯಿಂದ 14 ಗೇಟ್ ಗಳನ್ನು ತೆರೆದು 65,000 ಕ್ಯೂಸೆಕ್ ನೀರನ್ನು ನದಿಗೆ ಹರಿದು ಬಿಡಲಾಗುತ್ತಿದೆ. ನದಿ ದಂಡೆ ಪ್ರದೇಶದ ಜನರಿಗೆ ಎಚ್ಚರಿಕೆಯಿಂದ ಇರಲು ಅಧಿಕಾರಿಗಳು ತಿಳಿಸಿದ್ದಾರೆ.

# ‘ಮೈ ಆಜಾದ್ ಹೂ’ ಎಂದಿದ್ದ ಹದಿನೈದರ ಕ್ರಾಂತಿಕಾರಿ ಪೋರ



ಹದಿನೈದರ ಹರೆಯದಲಿ ಕಾಶಿ ವಿಶ್ವವಿದ್ಯಾಲಯದಿಂದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಧುಮುಕಿದ ಚಂದ್ರಶೇಖರ ತನ್ನ ನಿಜ ನಾಮದೇಯವನ್ನು ತಿಳಿಸದೆ, ತನ್ನ ಹೆಸರು ಆಜಾದ್, ತನ್ನ ತಂದೆ ಹೆಸರು "ಸ್ವಾತಂತ್ರ್ಯ" ನಿವಾಸ ಸ್ಥಾನ "ಜೈಲು" ಎಂದು ಹೇಳಿ ಛಡಿ ಏಟು ತಿಂದಿದ್ದ ಪೋರ. ಇಪ್ಪತ್ತೈದರ ಹರೆಯ ಸಾವಿನ ವಯಸ್ಸಲ್ಲ. ಆದರೂ ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕಾಗಿ ಹೋರಾಡಿ ಕೊನೆಗೆ ತನಗೆ ತಾನೇ ಗುಂಡಿಟ್ಟುಕೊಂಡು ಆತ್ಮಾಹುತಿಯಾದ ದುರಂತ ಕ್ರಾಂತಿಕಾರಿ ಚಂದ್ರಶೇಖರ್ ಆಜಾದ್. ಭಾರತದ ಸ್ವಾತಂತ್ರ್ಯ ಹೋರಾಟಗಾರರು ಎಂದಾಕ್ಷಣ ನೆನಪಿಗೆ ಬರುವಂತಹ ಕ್ರಾಂತಿಕಾರಿಗಳಲ್ಲಿ ಭಗತ್ ಸಿಂಗ್, ಸುಖದೇವ್, ರಾಜ್ ಗುರು, ಚಂದ್ರಶೇಖರ್ ಆಜಾದ್ ಪ್ರಮುಖವಾಗಿ ಸ್ಮೃತಿ ಪಟಲದಲ್ಲಿ ಬರುವ ಹೆಸರುಗಳು. ಇವರೆಲ್ಲರೂ ಆಂಗ್ಲರ ವಿರುದ್ಧ ತೋರಿದ ಕ್ರಾಂತಿಕಾರಕ ಧೋರಣೆಗಳು, ಬ್ರಿಟಿಷ್ ಸರ್ಕಾರಕ್ಕೆ ಜೀವಹಾನಿ, ಆರ್ಥಿಕ ಹಾನಿಗಳನ್ನು ಮಾಡಿ, ಅವರು ಸಂಕಷ್ಟಗಳನ್ನು ಎದುರಿಸುವಂತೆ ಮಾಡಿದ್ದರು. ಆಂಗ್ಲರು ಭಾರತವನ್ನು ಬಿಟ್ಟು ತೊಲಗಲು ಈ ಹದಿಹರೆಯದ ಕ್ರಾಂತಿಕಾರಿಗಳು ಕಾರಣವೆಂದರೆ ತಪ್ಪಾಗಲಾರದು.

ಭಾರತದ ಸ್ವಾತಂತ್ರ್ಯ ಸಂಗ್ರಾಮದ ಕೆಚ್ಚೆದೆಯ ಕಲಿಗಳಲ್ಲಿ ಒಬ್ಬರಾದ ಚಂದ್ರಶೇಖರ್ ಆಜಾದ್ ಅವರ ಜನ್ಮದಿನವಿಂದು. ಅಭಿಮಾನದಿಂದ ಅವರಿಗೊಂದು ಭಾವಪೂರ್ಣ ನುಡಿನಮನ ಸಲ್ಲಿಸೋಣವೇ...

23 ಜುಲೈ 1906ರಲ್ಲಿ ಸೀತಾರಾಮ್ ತಿವಾರಿ ಮತ್ತು ಜಾಗರಣಿ ದೇವಿ ದಂಪತಿಗಳ ಪುತ್ರನಾಗಿ ಚಂದ್ರಶೇಖರ್ ಭಾಭ್ರ ಗ್ರಾಮದ ಬ್ರಾಹ್ಮಣ ತಿವಾರಿ ಕುಟುಂಬದಲ್ಲಿ ಜನಿಸಿದರು. ಇವರ ಪೂರ್ವಿಕರು ಉತ್ತರ ಪ್ರದೇಶದ ಉನ್ನಾವೋ ಜಿಲ್ಲೆಯ ಬಾದರ್ಕಾ ಗ್ರಾಮದವರು. ಬಾದರ್ಕಾದಲ್ಲಿ ಅವರ ಮೊದಲ ಮಗ ಸುಖದೇವ್ ಜನಿಸಿದ ನಂತರ, ಕುಟುಂಬವು ಅಲಿರಾಜಪುರ ರಾಜ್ಯಕ್ಕೆ ಸ್ಥಳಾಂತರಗೊಂಡಿತು .

ಇವರ ತಾಯಿ ತನ್ನ ಮಗನನ್ನು ಶ್ರೇಷ್ಠ ಸಂಸ್ಕೃತ ವಿದ್ವಾಂಸನನ್ನಾಗಿ ಮಾಡಬೇಕೆಂದು ಕೊಂಡಿದ್ದರು. ಹಾಗಾಗಿ ಬನಾರಸ್ ನಲ್ಲಿರುವ ಕಾಶಿ ವಿದ್ಯಾಪೀಠಕ್ಕೆ ಓದಲು ಚಂದ್ರಶೇಖರ್ ಅವರನ್ನು ಕಳುಹಿಸಿದರು. ಆದರೆ ಹುಚ್ಚು ಕೋಡಿ ಮನಸು, ಹದಿನೈದರ ವಯಸ್ಸು ಸಂಸ್ಕೃತ ವಿದ್ವಾಂಸನಾಗಬೇಕಿದ್ದ ಚಂದ್ರಶೇಖರ್ ಸೀತಾರಾಮ್ ತಿವಾರಿಯನ್ನು ಯುವ ಕ್ರಾಂತಿಕಾರಿಯನ್ನಾಗಿಸಿತು.

ಅಸಹಕಾರ ಚಳವಳಿಯು 1921ರಲ್ಲಿ ಉತ್ತುಂಗದಲ್ಲಿತ್ತು. ಆಗ ವಿದ್ಯಾರ್ಥಿಯಾಗಿದ್ದ ಚಂದ್ರಶೇಖರ್ ಈ ಚಳುವಳಿಯಲ್ಲಿ ಪಾಲ್ಗೊಂಡರು. ಡಿಸೆಂಬರ್ 20 ರಂದು ಇವರನ್ನು ಬಂಧಿಸಲಾಯಿತು. ಒಂದು ವಾರ ಜೈಲು ವಾಸದ ನಂತರ ಪಾರ್ಸಿಯ ಜಿಲ್ಲಾ ಮ್ಯಾಜಿಸ್ಟ್ರೇಟ್ ನ್ಯಾಯಮೂರ್ತಿ ಎಂಪಿ ಖರೆಘಾಟ್ ಅವರ ಮುಂದೆ ಚಂದ್ರಶೇಖರ್ ಅವರನ್ನು ಹಾಜರುಪಡಿಸಿದರು. ಆಗ ಚಂದ್ರಶೇಖರ್ ಅವರು ತಮ್ಮ ಹೆಸರನ್ನು "ಆಜಾದ್" ( ದಿ ಫ್ರೀ ), ತಂದೆಯ ಹೆಸರನ್ನು "ಸ್ವತಂತ್ರತಾ" ( ಸ್ವಾತಂತ್ರ್ಯ ) ಮತ್ತು ಅವರ ನಿವಾಸ ಸ್ಥಳವನ್ನು "ಜೈಲು" ಎಂದು ಹೇಳಿದರು. ಕೋಪಗೊಂಡ ಮ್ಯಾಜಿಸ್ಟ್ರೇಟ್ ರು 15 ವರ್ಷದ ಬಾಲಕನಿಗೆ 15 ಛಡಿ ಏಟಿನ ಶಿಕ್ಷೆಯನ್ನು ವಿಧಿಸಿದರು. ಆದರೂ ತನ್ನ ಹೆಸರು "ಆಜಾದ್" ಎಂದು ಹೇಳುವುದನ್ನು ಬಿಡಲಿಲ್ಲ. ಅಂದಿನಿಂದ ಚಂದ್ರಶೇಖರ್ ತಿವಾರಿ, ಚಂದ್ರಶೇಖರ್ ಆಜಾದ್ ಎಂದೇ ಪರಿಚಿತರಾದರು.

ಮಹಾತ್ಮಾ ಗಾಂಧಿಯವರು 1922 ರಲ್ಲಿ ಅಸಹಕಾರ ಚಳುವಳಿಯನ್ನು ಅಮಾನತುಗೊಳಿಸಿದಾಗ ಆಜಾದ್ ನಿರಾಶೆಗೊಂಡರು. ಅವರು ಯುವ ಕ್ರಾಂತಿಕಾರಿ, ಮನ್ಮಥ್ ನಾಥ್ ಗುಪ್ತಾ ಅವರನ್ನು ಭೇಟಿಯಾದರು. ಅವರು ಕ್ರಾಂತಿಕಾರಿ ಸಂಘಟನೆಯಾದ ಹಿಂದೂಸ್ತಾನ್ ರಿಪಬ್ಲಿಕನ್ ಅಸೋಸಿಯೇಷನ್ ಸ್ಥಾಪಿಸಿದ್ದ ರಾಮ್ ಪ್ರಸಾದ್ ಬಿಸ್ಮಿಲ್ ಅವರಿಗೆ ಪರಿಚಯಿಸಿದರು . ನಂತರ ಅವರು ಹೆಚ್. ಆರ್.ಎ. ಯ ಸಕ್ರಿಯ ಸದಸ್ಯರಾದರು ಮತ್ತು ಈ ಸಂಘಟನೆಗಾಗಿ ಹಣವನ್ನು ಸಂಗ್ರಹಿಸಲು ಪ್ರಾರಂಭಿಸಿದರು. ಬ್ರಿಟಿಷ್ ಸರ್ಕಾರದ ಆಸ್ತಿಯನ್ನು ದರೋಡೆ ಮಾಡುವ ಮೂಲಕ ಹೆಚ್ಚಿನ ನಿಧಿ ಸಂಗ್ರಹವಾಗ ತೊಡಗಿತು. ಇವರು 1925 ರ ಕಾಕೋರಿ ರೈಲು ದರೋಡೆ , ಲಾಲಾ ಲಜಪತ್ ರಾಯ್ ಹತ್ಯೆಗೆ ಸೇಡು ತೀರಿಸಿಕೊಳ್ಳಲು 1928 ರಲ್ಲಿ ಲಾಹೋರ್‌ನಲ್ಲಿ ಜಾನ್ ಪಿ. ಸೌಂಡರ್ಸ್ ಅವರ ಗುಂಡಿನ ದಾಳಿ ಮತ್ತು ಅಂತಿಮವಾಗಿ 1929 ರಲ್ಲಿ ವೈಸರಾಯ್ ಆಫ್ ಇಂಡಿಯಾ ರೈಲನ್ನು ಸ್ಫೋಟಿಸುವ ಪ್ರಯತ್ನದಲ್ಲಿ ಭಾಗಿಯಾಗಿದ್ದರು.

ಆಜಾದ್ ಝಾನ್ಸಿಯನ್ನು ಕೆಲಕಾಲ ತನ್ನ ಸಂಸ್ಥೆಯ ಕೇಂದ್ರವನ್ನಾಗಿ ಮಾಡಿಕೊಂಡರು. ಅವರು ಝಾನ್ಸಿಯಿಂದ 15 ಕಿಲೋಮೀಟರ್ ದೂರದಲ್ಲಿರುವ ಓರ್ಛಾ ಅರಣ್ಯವನ್ನು ಶೂಟಿಂಗ್ ಅಭ್ಯಾಸದ ತಾಣವಾಗಿ ಬಳಸಿಕೊಂಡರು. ಪರಿಣಿತ ಗುರಿಕಾರರಾಗಿ, ಅವರು ತಮ್ಮ ಗುಂಪಿನ ಇತರ ಸದಸ್ಯರಿಗೆ ತರಬೇತಿಯನ್ನು ನೀಡಿದರು. ಇವರು ಸತಾರ್ ನದಿಯ ದಡದಲ್ಲಿರುವ ಹನುಮಾನ್ ದೇವಾಲಯದ ಬಳಿ ಗುಡಿಸಲನ್ನು ನಿರ್ಮಿಸಿದರು ಮತ್ತು ಅಲ್ಲಿ ಪಂಡಿತ್ ಹರಿಶಂಕರ್ ಬ್ರಹ್ಮಚಾರಿ ಎಂಬ ಹೆಸರಿನಲ್ಲಿ ವಾಸಿಸಿದರು. ಕ್ರಾಂತಿಕಾರಿ ಕರಪತ್ರಗಳಲ್ಲಿ ಬಾಲರಾಜ್ ಎಂದು ಸಹಿ ಮಾಡುತ್ತಿದ್ದರು. ಧಿಮಾರಪುರ ಗ್ರಾಮದ ಮಕ್ಕಳಿಗೆ ವಿದ್ಯೆಯನ್ನು ಕಲಿಸಿದರು. ಸ್ಥಳೀಯ ನಿವಾಸಿಗಳೊಂದಿಗೆ ಉತ್ತಮ ಬಾಂಧವ್ಯವನ್ನು ಸ್ಥಾಪಿಸುವಲ್ಲಿ ಯಶಸ್ವಿಯಾದರು.

ಝಾನ್ಸಿಯಲ್ಲಿ ವಾಸವಾಗಿದ್ದಾಗ ಸದರ್ ಬಜಾರ್ನ ಬುಂದೇಲ್ಖಂಡ್ ಮೋಟಾರ್ ಗ್ಯಾರೇಜ್ನಲ್ಲಿ ಕಾರು ಓಡಿಸಲು ಕಲಿತರು . ಸದಾಶಿವರಾವ್ ಮಲ್ಕಾಪುರ್ಕರ್, ವಿಶ್ವನಾಥ್ ವೈಶಂಪಾಯನ್ ಮತ್ತು ಭಗವಾನ್ ದಾಸ್ ಮಹೂರ್ ಅವರೊಂದಿಗೆ ನಿಕಟ ಸಂಪರ್ಕಕ್ಕೆ ಬಂದರು. ಕ್ರಾಂತಿಕಾರಿ ಗುಂಪಿನ ಅವಿಭಾಜ್ಯ ಅಂಗವಾದರು. ಆಗಿನ ಕಾಂಗ್ರೆಸ್ ನಾಯಕರಾದ ರಘುನಾಥ್ ವಿನಾಯಕ್ ಧುಲೇಕರ್ ಮತ್ತು ಸೀತಾರಾಮ್ ಭಾಸ್ಕರ್ ಭಾಗವತ್ ಕೂಡ ಆಜಾದ್ ಅವರಿಗೆ ನಿಕಟರಾಗಿದ್ದರು. ಅವರು ನಾಯ್ ಬಸ್ತಿಯಲ್ಲಿರುವ ರುದ್ರ ನಾರಾಯಣ ಸಿಂಗ್ ಅವರ ಮನೆಯಲ್ಲಿ ಮತ್ತು ನಾಗ್ರಾದ ಭಾಗವತ್ ಅವರ ಮನೆಯಲ್ಲಿ ಸ್ವಲ್ಪ ಕಾಲವಿದ್ದರು .

ಹಿಂದೂಸ್ತಾನ್ ರಿಪಬ್ಲಿಕನ್ ಅಸೋಸಿಯೇಷನ್ ಅನ್ನು ರಾಮ್ ಪ್ರಸಾದ್ ಬಿಸ್ಮಿಲ್ , ಜೋಗೇಶ್ ಚಂದ್ರ ಚಟರ್ಜಿ , ಸಚೀಂದ್ರ ನಾಥ್ ಸನ್ಯಾಲ್ ಮತ್ತು ಸಚಿಂದ್ರ ನಾಥ್ ಬಕ್ಷಿ ಅವರು 1923 ರಲ್ಲಿ ರಚಿಸಿದ್ದರು . 1925 ರಲ್ಲಿ ಕಾಕೋರಿ ರೈಲು ದರೋಡೆಯ ನಂತರ , ಬ್ರಿಟಿಷರು ಕ್ರಾಂತಿಕಾರಿ ಚಟುವಟಿಕೆಗಳನ್ನು ಹತ್ತಿಕ್ಕಿದರು. ರಾಮ್ ಪ್ರಸಾದ್, ಅಶ್ಫಾಕುಲ್ಲಾ ಖಾನ್ , ಠಾಕೂರ್ ರೋಷನ್ ಸಿಂಗ್ ಮತ್ತು ರಾಜೇಂದ್ರ ನಾಥ್ ಲಾಹಿರಿ ಅವರ ಭಾಗವಹಿಸುವಿಕೆಗಾಗಿ ಮರಣದಂಡನೆ ವಿಧಿಸಲಾಯಿತು. ಆಜಾದ್ ಅವರು ,ಕೇಶಬ್ ಚಕ್ರವರ್ತಿ ಮತ್ತು ಮುರಾರಿ ಲಾಲ್ ಗುಪ್ತಾ ಬಂಧನಕ್ಕೊಳಗಾಗುವುದನ್ನು ತಪ್ಪಿಸಿದರು. ನಂತರ ಆಜಾದ್ ರವರು ಶಿವ ವರ್ಮಾ ಮತ್ತು ಮಹಾಬೀರ್ ಸಿಂಗ್ ರಂತಹ ಸಹ ಕ್ರಾಂತಿಕಾರಿಗಳ ಸಹಾಯದಿಂದ ಹೆಚ್. ಆರ್.ಎ. ಯನ್ನು ಮರು ಸಂಘಟಿಸಿದರು.

1928 ರಲ್ಲಿ, ಭಗತ್ ಸಿಂಗ್ ಮತ್ತು ಇತರ ಕ್ರಾಂತಿಕಾರಿಗಳೊಂದಿಗೆ ಅವರು ಹಿಂದೂಸ್ತಾನ್ ರಿಪಬ್ಲಿಕನ್ ಅಸೋಸಿಯೇಷನ್ ಅನ್ನು ರಹಸ್ಯವಾಗಿ ಮರುಸಂಘಟಿಸಿದರು, ಅದನ್ನು ಹಿಂದೂಸ್ತಾನ್ ಸಮಾಜವಾದಿ ರಿಪಬ್ಲಿಕನ್ ಅಸೋಸಿಯೇಷನ್ ಎಂದು ಮರುನಾಮಕರಣ ಮಾಡಿದರು. 8 ಮತ್ತು 9 ಸೆಪ್ಟೆಂಬರ್, ತಮ್ಮ ಪ್ರಾಥಮಿಕ ಗುರಿಯನ್ನು ಸಾಧಿಸಲು ಸ್ವತಂತ್ರ ಸಮಾಜವಾದಿ ಭಾರತ, ಲಾಲಾ ರಾಜಪತ್ ರಾಯ್ ಅವರ ಸಾವಿಗೆ ಪ್ರತೀಕಾರ ತೀರಿಸಿಕೊಳ್ಳಲು ಆಜಾದ್ ನಂತರ ಶಿವರಾಮ ರಾಜಗುರು , ಸುಖದೇವ್ ಥಾಪರ್ ಮತ್ತು ಭಗತ್ ಸಿಂಗ್ ರಂತಹ ಕ್ರಾಂತಿಕಾರಿಗಳೊಂದಿಗೆ ಸಂಚು ರೂಪಿಸಿ ಪೊಲೀಸ್ ವರಿಷ್ಠಾಧಿಕಾರಿ ಜೇಮ್ಸ್ ಎ. ಸ್ಕಾಟ್ ಅವರನ್ನು ಹತ್ಯೆ ಮಾಡಿದರು. ಆದಾಗ್ಯೂ, ತಪ್ಪಾದ ಗುರುತಿನ ಪ್ರಕರಣದಲ್ಲಿ, ಸಂಚುಕೋರರು ಸಹಾಯಕ ಪೊಲೀಸ್ ಅಧೀಕ್ಷಕ ಜಾನ್ ಪಿ. ಸೌಂಡರ್ಸ್ಗೆ ಗುಂಡು ಹಾರಿಸಿದರು, ಆಜಾದ್ ಅವರು ಭಾರತೀಯ ಪೊಲೀಸ್ ಹೆಡ್ ಕಾನ್ಸ್ಟೆಬಲ್ ಚನ್ನನ್ ಸಿಂಗ್ನನ್ನು ಗುಂಡಿಕ್ಕಿ ಕೊಂದರು, ಅವರು ಸಿಂಗ್ ಮತ್ತು ರಾಜ್ಗುರು ಓಡಿಹೋಗುತ್ತಿದ್ದಂತೆ ಬೆನ್ನಟ್ಟಲು ಪ್ರಯತ್ನಿಸಿದರು. ಇವರು 17 ಡಿಸೆಂಬರ್ 1928 ರಂದು ಲಾಹೋರ್‌ನಲ್ಲಿರುವ ಜಿಲ್ಲಾ ಪೊಲೀಸ್ ಪ್ರಧಾನ ಕಛೇರಿಯನ್ನು ತೊರೆದರು. ಕ್ರಾಂತಿಕಾರಿ ಚಟುವಟಿಕೆಗಳ ಒಳನೋಟವನ್ನು ಹೆಚ್.ಎಸ್.ಆರ್.ಎ.ನ ಸಹ ಸದಸ್ಯರಾದ ಮನ್ಮಥ್ ನಾಥ್ ಗುಪ್ತಾ ಅವರು ತಮ್ಮ ಹಲವಾರು ಬರಹಗಳಲ್ಲಿ ವಿವರಿಸಿದ್ದಾರೆ . ಗುಪ್ತಾ ಅವರು "ಚಂದ್ರಶೇಖರ್ ಆಜಾದ್" ಎಂಬ ತಮ್ಮ ಜೀವನಚರಿತ್ರೆಯನ್ನು ಭಾರತೀಯ ಕ್ರಾಂತಿಕಾರಿ ಚಳವಳಿಯ ಇತಿಹಾಸದಲ್ಲಿ ಬರೆದಿದ್ದಾರೆ.

ಫೆಬ್ರುವರಿ 27, 1931 ರಂದು, ಅಲಹಾಬಾದ್ನ ಸಿ.ಐ.ಡಿ.ಯ ಮುಖ್ಯಸ್ಥ ಜೆ.ಆರ್.ಹೆಚ್. ನಾಟ್ ಬೋವರ್ಗೆ ಯಾರೋ ಒಬ್ಬರು ಆಜಾದ್ ರವರು ಆಲ್ಫ್ರೆಡ್ ಪಾರ್ಕ್ನಲ್ಲಿದ್ದಾರೆ. ಅವರ ಸಹಚರ ಮತ್ತು ಸಹಾಯಕ ಸುಖದೇವ್ ರಾಜ್ ಅವರೊಂದಿಗೆ ಮಾತನಾಡುತ್ತಿದ್ದಾರೆ ಎಂದು ಸುಳಿವು ನೀಡಿದರು. ಅದನ್ನು ಸ್ವೀಕರಿಸಿದ ಬೋವರ್ ತನ್ನನ್ನು ಬಂಧಿಸಲು ಉದ್ಯಾನವನಕ್ಕೆ ತನ್ನೊಂದಿಗೆ ಬರುವಂತೆ ಅಲಹಾಬಾದ್ ಪೊಲೀಸರನ್ನು ಕರೆದನು. ಪೊಲೀಸರು ಉದ್ಯಾನವನಕ್ಕೆ ಆಗಮಿಸಿ ನಾಲ್ಕು ಕಡೆಯಿಂದ ಸುತ್ತುವರಿದಿದ್ದರು. ಡಿ.ಎಸ್ಪಿ. ಠಾಕೂರ್ ವಿಶ್ವೇಶ್ವರ್ ಸಿಂಗ್ ಅವರೊಂದಿಗೆ ಕೆಲವು ಕಾನ್ಸ್ಟೆಬಲ್ಗಳು ರೈಫಲ್ಗಳೊಂದಿಗೆ ಶಸ್ತ್ರಸಜ್ಜಿತವಾಗಿ ಉದ್ಯಾನವನಕ್ಕೆ ಪ್ರವೇಶಿಸಿದ್ದರು ಮತ್ತು ಶೂಟೌಟ್ ಪ್ರಾರಂಭವಾಯಿತು. ಆಜಾದ್ ಮೂವರು ಪೊಲೀಸರನ್ನು ಕೊಂದರು ಆದರೆ ತನ್ನನ್ನು ತಾನು ರಕ್ಷಿಸಿಕೊಳ್ಳುವ ಮತ್ತು ತನ್ನ ಸಹಚರ ರಾಜ್ಗೆ ಸಹಾಯ ಮಾಡುವ ಪ್ರಕ್ರಿಯೆಯಲ್ಲಿ ತೀವ್ರವಾಗಿ ಗಾಯಗೊಂಡರು. ಸ್ವಾತಂತ್ರ್ಯ ಹೋರಾಟವನ್ನು ಮುಂದುವರಿಸಲು ಆಜಾದ್ ಅವರನ್ನು ಹೊರಹೋಗುವಂತೆ ಹೇಳಿದರು ಮತ್ತು ಉದ್ಯಾನವನದಿಂದ ಸುರಕ್ಷಿತವಾಗಿ ತಪ್ಪಿಸಿಕೊಳ್ಳಲು ರಾಜ್ ಅವರಿಗೆ ಬೆಂಕಿಯನ್ನು ನೀಡಿದರು. ಆಜಾದ್ ತನ್ನನ್ನು ರಕ್ಷಿಸಿಕೊಳ್ಳಲು ಮರದ ಹಿಂದೆ ಅಡಗಿಕೊಂಡು ಅದರ ಹಿಂದಿನಿಂದ ಗುಂಡು ಹಾರಿಸಲು ಪ್ರಾರಂಭಿಸಿದರು. ಪೊಲೀಸರು ಪ್ರತಿಯಾಗಿ ಗುಂಡು ಹಾರಿಸಿದರು. ಸುದೀರ್ಘ ಶೂಟೌಟ್ ನಂತರ, ಯಾವಾಗಲೂ ಆಜಾದ್ ಆಜಾದಾಗಿಯೇ ಉಳಿಯುತ್ತೇನೆ ಮತ್ತು ಎಂದಿಗೂ ಜೀವಂತವಾಗಿ ಆಂಗ್ಲ ಸರ್ಕಾರಕ್ಕೆ ಸೆರೆ ಹಿಡಿಯಲಾಗುವುದಿಲ್ಲ ಎಂಬ ತನ್ನ ಪ್ರತಿಜ್ಞೆಗೆ ಬದ್ಧನಾಗಿ, ತಮ್ಮ ಬಂದೂಕಿನ ಕೊನೆಯ ಬುಲೆಟ್ನಿಂದ, ತನ್ನ ತಲೆಗೆ ಗುಂಡು ಹಾರಿಸಿಕೊಂಡರು. ಶೂಟೌಟ್ನಲ್ಲಿ ಬೋವರ್ ಮತ್ತು ಡಿಎಸ್ಪಿ ಸಿಂಗ್ ಕೂಡ ಗಾಯಗೊಂಡಿದ್ದರು. ಇತರ ಅಧಿಕಾರಿಗಳು ಸ್ಥಳಕ್ಕೆ ಬಂದು, ಆಜಾದ್ನ ಶವವನ್ನು ಹೊರತೆಗೆದರು. ಆಜಾದ್ ಸತ್ತಿರುವುದನ್ನು ಕಂಡು ಅವರ ಹತ್ತಿರ ಬರಲು ಪೋಲಿಸರು ಹಿಂಜರಿದರು.

ಸಾರ್ವಜನಿಕರಿಗೆ ಮಾಹಿತಿ ನೀಡದೆ ಶವವನ್ನು ರಸೂಲಾಬಾದ್ ಘಾಟ್ಗೆ ಅಂತ್ಯಸಂಸ್ಕಾರಕ್ಕೆ ಕಳುಹಿಸಿದರು. ನಂತರ ಈ ವಿಷಯ ಬೆಳಕಿಗೆ ಬರುತ್ತಿದ್ದಂತೆ ಜನರು ಘಟನೆ ನಡೆದ ಉದ್ಯಾನವನವನ್ನು ಸುತ್ತುವರೆದರು. ಬ್ರಿಟಿಷ್ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದರು ಮತ್ತು ಆಜಾದ್ ಅವರಿಗೆ ನಮಿಸಿದರು.

ಭಾರತದಾದ್ಯಂತ ಹಲವಾರು ಶಾಲೆಗಳು, ಕಾಲೇಜುಗಳು, ರಸ್ತೆಗಳು ಮತ್ತು ಇತರ ಸಾರ್ವಜನಿಕ ಸಂಸ್ಥೆಗಳಿಗೆ ಆಜಾದ್ ಅವರ ಹೆಸರನ್ನು ಇಡಲಾಗಿದೆ. ಇವರ ಜೀವನಗಾಥೆಯ ಕುರಿತು ಅನೇಕ ಚಲನಚಿತ್ರಗಳು ಮತ್ತು ದೂರದರ್ಶನದಲ್ಲಿ ಧಾರವಾಹಿಯಾಗಿ ಪ್ರಸಾರಗೊಂಡಿವೆ.

2023 ರಲ್ಲಿ ಡಿಡಿ ನ್ಯಾಷನಲ್ ಧಾರಾವಾಹಿ "ಸ್ವರಾಜ್ ಚಂದ್ರ ಶೇಖರ್ ಆಜಾದ್" ಅವರ ಕುರಿತು ಸಂಪೂರ್ಣ 65 ಸಂಚಿಕೆಯನ್ನು ಪ್ರಸಾರ ಮಾಡಿತು. ಇಂತಹ ದೃಢ ಸಂಕಲ್ಪದ ರಾಷ್ಟ್ರೀಯತಾವಾದಿಗಳು ಮತ್ತೊಮ್ಮೆ ನಮ್ಮ ಈ ಭರತ ಭೂಮಿಯಲ್ಲಿ ಜನಿಸಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತ, ಚಂದ್ರಶೇಖರ್ ಆಜಾದರಿಗೆ ಜನ್ಮದಿನದ ನುಡಿನಮನಗಳನ್ನು ಅರ್ಪಿಸೋಣವೇ...

* * *



ಲತಾ ಕೆ.ಎಸ್. ಹೆಗಡೆ
ಬೆಂಗಳೂರು

# ಮುಚಖಂಡಿಯಲ್ಲಿ ಬಸವೇಶ್ವರ ವಾಣಿಜ್ಯ ಮಹಾವಿದ್ಯಾಲಯದ ಎನ್.ಎಸ್.ಎಸ್.ಶಿಬಿರಾರ್ಥಿಗಳಿಂದ ಡೆಂಗ್ಯೂ ಜಾಗೃತಿ ಜಾಥಾ




**ಬಾಗಲಕೋಟೆ :** ಬಿ.ವಿ.ವಿ.ಸಂಘದ ಬಸವೇಶ್ವರ ವಾಣಿಜ್ಯ ಮಹಾವಿದ್ಯಾಲಯದ ಎನ್.ಎಸ್.ಎಸ್ ಶಿಬಿರಾರ್ಥಿಗಳಿಂದ ಡೆಂಗ್ಯೂ ಜಾಗೃತಿ ಜಾಥಾ ಮಾಡಲಾಯಿತು.

ಬಸವೇಶ್ವರ ವಾಣಿಜ್ಯ ಮಹಾವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನೆ ಘಟಕಗಳ ವತಿಯಿಂದ 2023-24 ನೇ ಸಾಲಿನ ವಾರ್ಷಿಕ ವಿಶೇಷ ಶಿಬಿರವನ್ನು ದತ್ತು ಗ್ರಾಮ ಮುಚಖಂಡಿಯಲ್ಲಿ ಹಮ್ಮಿಕೊಳ್ಳಲಾಗಿದ್ದು, ಐದನೇ ದಿನ ಶನಿವಾರ ಶಿಬಿರಾರ್ಥಿಗಳು ಡೆಂಗ್ಯೂ ಜಾಗೃತಿ ಜಾಥಾ ಮಾಡಿದರು. ಗ್ರಾಮದ ಐತಿಹಾಸಿಕ ವೀರಭದ್ರೇಶ್ವರ ದೇವಸ್ಥಾನದಿಂದ ಪ್ರಾರಂಭವಾದ ಜಾಥಾ ಗ್ರಾಮದ ಪ್ರಮುಖ ರಸ್ತೆಗಳ ಮುಖಾಂತರ ಸಂಚರಿಸಿ ಡೆಂಗ್ಯೂ ಹರಡುವ, ಅದನ್ನು ತಡೆಗಟ್ಟುವ ನಿಟ್ಟಿನಲ್ಲಿ ಕೈಗೊಳ್ಳಬೇಕಾದ ವಿಧಾನಗಳ ಬಗ್ಗೆ ಬಿದಿ ನಾಟಕಗಳ ಮೂಲಕ ಜನರಲ್ಲಿ ಜಾಗೃತಿ ಮೂಡಿಸಿದರಲ್ಲದೆ, ಮೂಢನಂಬಿಕೆ ಹಾಗೂ ರಕ್ತದಾನದ ಮಹತ್ವ ಕುರಿತು ತಿಳಿಸಲಾಯಿತು.

ಈ ಜಾತದಲ್ಲಿ ಎನ್.ಎಸ್. ಅಧಿಕಾರಿ ಡಾ. ಎಂ ಎಂ ಹುದ್ದಾರ, ಡಾ. ಬಸವರಾಜ ಖೋತ, ರವಿ ಬೆಳಗೆರೆ ಹಾಗೂ ಕುಮಾರಿ ಪ್ರಿಯಾಂಕ ಹಾಗೂ ಎಲ್ಲ ಶಿಬಿರಾರ್ಥಿಗಳು ಜಾಥಾದಲ್ಲಿ ಭಾಗವಹಿಸಿದ್ದರು.

ಸಾಯಂಕಾಲ ನಡೆದ ಐತಿಹಾಸಿಕ ಸ್ಮಾರಕಗಳ ಸ್ಮಾರಕಗಳ ರಕ್ಷಣೆ ಕುರಿತು ಉಪನ್ಯಾಸ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಮುಧೋಳದ ಶ್ರೀ ಎಸ್ ಆರ್ ಕಂಠಿ ಕಲಾ, ವಾಣಿಜ್ಯ ಹಾಗೂ ವಿಜ್ಞಾನ ಮಹಾವಿದ್ಯಾಲಯದ ಪ್ರಾಚಾರ್ಯರಾದ ಎಮ್. ವ್ಹಿ. ಜಿಗಬಡ್ಡಿ ಹಾಗೂ ಡಾ. ಬಸವರಾಜ ಪಿ.ಕುಂಬಾರ ಅವರು ಉಪನ್ಯಾಸ ನೀಡಿದರು. ಅಧ್ಯಕ್ಷತೆಯನ್ನು ಮಹಾವಿದ್ಯಾಲಯದ ಪ್ರಾಚಾರ್ಯರಾದ ಜಗನ್ನಾಥ ವ್ಹಿ ಚವ್ಹಾಣ ವಹಿಸಿದ್ದರು. ವೇದಿಕೆ ಮೇಲೆ ಡಾ. ಎಂ ನಂಜುಂಡಸ್ವಾಮಿ, ಡಾ ಬಸವರಾಜ ವ್ಹಿ. ಖೋತ, ಶ್ರೀ ಆರ್ ಪಿ ಮೇಲಿನಮನಿ, ಶ್ರೀ ಎಂ ಎಚ್ ಜನ್ನಪ್ಪಗೋಳ, ಆರ್. ಎಂ ತ್ಯಾಪಿ ಅವರು ಉಪಸ್ಥಿತರಿದ್ದರು.

# ಆರ್ಯವೈಶ್ಯ ಸಮುದಾಯ: ವಿವಿಧ ಸೌಲಭ್ಯಗಳಿಗೆ ಅರ್ಜಿ

**ಬಾಗಲಕೋಟೆ:**ಕರ್ನಾಟಕಆರ್ಯವೈಶ್ಯಸಮುದಾಯ ಅಭಿವೃದ್ಧಿ ನಿಗಮವು ಪ್ರಸಕ್ತ ಸಾಲಿನಲ್ಲಿ ವಿವಿಧ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಈ ಯೋಜನೆಯಡಿ ಸಾಲ ಸೌಲಭ್ಯವನ್ನು ನೀಡಲು ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿಯನ್ನು ವೆಬ್‌ಸೈಟ್ www.kacdc.karnataka.gov.inಮೂಲಕಆಗಸ್ಟ31ರೊಳಗಾಗಿ ಅರ್ಜಿ ಸಲ್ಲಿಸಬೇಕು. ಅರ್ಜಿ ಸಲ್ಲಿಸುವವರು ಆರ್ಯ ವೈಶ್ಯ ಸಮುದಾಯಕ್ಕೆ ಸೇರಿದವರಾಗಿದ್ದು, ಜಾತಿ ಮತ್ತು ಆದಾಯ ಪ್ರಮಾಣಪತ್ರ, ಆಧಾರ ಸಂಖ್ಯೆಗೆ ಮೊಬೈಲ್ ಸಂಖ್ಯೆ ಜೋಡಣೆ, ಬ್ಯಾಂಕ್ ಖಾತೆಗೆ ಆಧಾರ ಸೀಡ್ ಮಾಡಿರಬೇಕು. ಆಯ್ಕೆಯಲ್ಲಿ ಶೇ.33 ರಷ್ಟು ಮಹಿಳೆಯರಿಗೆ ಶೇ.5 ರಷ್ಟು ವಿಕಲಚೇತನರಿಗೆ ಹಾಗೂತೃತೀಯಲಿಂಗಗಳಿಗೆ ಮೀಸಲಿರಿಸಿದೆ.ಒಂದು ಕುಟುಂಬದಲ್ಲಿಒಬ್ಬರುಮಾತ್ರಯೋಜನೆಯಸೌಲಭ್ಯ ಪಡೆಯಬಹುದಾಗಿದೆ.

**ಸ್ವಯಂಉದ್ಯೋಗಕ್ಕನೇರಸಾಲ:**ಈಯೋಜನೆಯಡಿ ವಾರ್ಷಿಕ ವರಮಾನ 3 ಲಕ್ಷ ಮೀರಿರಬಾರದು. 18 ವರ್ಷ್ ಮೇಲ್ಪಟ್ಟು 55 ವರ್ಷ ಒಳಗಿನವರು ಇರಬೇಕು. 1 ಲಕ್ಷ ಸಾಲ ಒದಗಿಸಲಾಗುತ್ತಿದ್ದು, ಈ ಮೊತ್ತದಲ್ಲಿ ಶೇ.20 ರಷ್ಟು ಸಹಾಯಧನ ಹಾಗೂ ಶೇ.80 ರಷ್ಟು ಸಾಲವನ್ನು ವಾರ್ಷಿಕ ಶೇ.4ರ ಬಡ್ಡಿದರದಲ್ಲಿ ಮಂಜೂರು ಮಾಡಲಾಗುತ್ತದೆ. 2 ತಿಂಗಳ ವಿರಾಮ ಅವಧಿ ಇರುತ್ತದೆ. 2019-20, 2020-21ನೇ ಸಾಲಿನ ಫಲಾನುಭವಿಗಳು ಪಡೆದ ಸಾಲವನ್ನು ಅವಧಿಯೊಳಗೆ ಸಂಪೂರ್ಣವಾಗಿ ಪಾವತಿಸಿದಲ್ಲಿ ಪುನಃ ಅರ್ಜಿ ಸಲ್ಲಿಸಲು ಅವಕಾಶವಿರುತ್ತದೆ.

**ಆಹಾರ ವಾಹಿನಿ/ವಾಹಿನಿ ಯೋಜನೆ :** ಈ ಯೋಜನೆಯಡಿ ವಾರ್ಷಿಕ ವರಮಾನ 6 ಲಕ್ಷ, ವಯೋಮಿತಿ 21 ರಿಂದ 55 ವರ್ಷ ಒಳಗಿರಬೇಕು. ಎಲೋ ಬೋರ್ಡ ತ್ರಿಚಕ್ರ ವಾಹನ, ನಾಲ್ಕು ಚಕ್ರ ವಾಹನ ಖರೀದಿಸಲು 1 ಲಕ್ಷವರೆಗೆ ಸಹಾಯಧನ ನೀಡಲಾಗುತ್ತದೆ. ಬಾಕಿ ಮೊತ್ತ ಬ್ಯಾಂಕಿನಿಂದ ಸಾಲ ಪಡೆದುಕೊಳ್ಳಬೇಕು. ವಾಹನವನ್ನು ಆಹಾರ ವಾಹಿನಿಯಾಗಿ ಪರಿವರ್ತಿಸಿದಲ್ಲಿ ಮಾತ್ರ 2ನೇ ಕಂತಿನ ಮೊತ್ತ1ಲಕ್ಷಸಹಾಯಧನನೇರವಾಗಿಫಲಾನುಭವಿಗಳ ಖಾತೆಗೆ ಬಿಡುಗಡೆ ಮಾಡಲಾಗುತ್ತದೆ.

**ವಾಸನಿ ಜಲಶಕ್ತಿ ಯೋಜನೆ :** ಈ ಯೋಜನೆಯಡಿ 2 ರಿಂದ 15 ಎಕರೆ ಕೃಷಿ ಭೂಮಿ ಹೊಂದಿದವರಿಗೆ ನೀರಾವರಿ ಸೌಲಭ್ಯ ಒದಗಿಸಲು ಸಾಲ ಸಹಾಯಧ ನೀಡಲಾಗುತ್ತದೆ. ವಾರ್ಷಿಕ ವರಮಾನ 6 ಲಕ್ಷ ಇದ್ದು, 21 ರಿಂದ 55 ವರ್ಷದೊಳಗಿರಬೇಕು. ಗರಿಷ್ಠ 2 ಲಕ್ಷ ರೂ.ಗಳ ಸಾಲವನ್ನು ವಾರ್ಷಿಕ ಶೇ.4ರ ಬಡ್ಡಿದರದಲ್ಲಿ ಒದಗಿಸಲಾಗುತ್ತದೆ. ವಿದ್ಯುದ್ದೀಕರಣಕ್ಕಾಗಿ 50 ಸಾವಿರ ರೂ. ಸಹಾಯಧನ ನೀಡಲಾಗುತ್ತದೆ. 6 ತಿಂಗಳ ವಿರಾಮಾವಧಿ ಇರುತ್ತದೆ. ನಂತರ ಸಾಲವನ್ನು 34 ಮಾಸಿಕ ಕಂತುಗಳಲ್ಲಿ ಮರುಪಾವತಿಸಬೇಕು.

**ಅರಿವು ಶೈಕ್ಷಣಿಕ ಸಾಲ ಯೋಜನೆ:**ಈ ಯೋಜನೆಯಡಿ ಸಿಇಟಿ/ಎನ್.ಇಇಟಿ ಪ್ರವೇಶ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ವೃತ್ತಿಪರ ಕೋರ್ಸ ಹಾಗೂ ಪಿ.ಎಚ್.ಡಿನಲ್ಲಿವ್ಯಾಸಂಗಮಾಡುವವಿದ್ಯಾರ್ಥಿಗಳಿಗೆವಾರ್ಷಿಕ 1 ಲಕ್ಷ ರೂ.ಗಳ ಸಾಲವನ್ನು ಶೇ.2ರ ಬಡ್ಡಿದರದಲ್ಲಿ ನೀಡಲಾಗುತ್ತದೆ. ವ್ಯಾಸಂಗ ಪೂರ್ಣಗೊಂಡ ನಂತರ 4ತಿಂಗಳವಿರಾಮಾವಧಿಇರುತ್ತದೆ.ನಂತರಸಾಲವನ್ನು 36 ಮಾಸಿಕ ಕಂತುಗಳಲ್ಲಿ ಪರುಪಾವತಿಸಬೇಕು. 18 ರಿಂದ35ವರ್ಷದವರಾಗಿದ್ದು,ವಾರ್ಷಿಕವರಮಾನ6 ಲಕ್ಷಮೀರಿರಬಾರದು.ಹೆಚ್ಚಿನಮಾಹಿತಿಗಾಗಿನಿಗಮದ ಸಹಾಯವಾಣಿ 9448451111ಗೆ ಸಂಪರ್ಕಿಸುವಂತೆ ನಿಗಮದ ಜಿಲ್ಲಾ ವ್ಯವಸ್ಥಾಪಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಗುರುಶಾಂತವ್ವ ಹೊನವಾಡ ನಿಧನ



**ಬನಹಟ್ಟಿ :** ಇಲ್ಲಿಯ ಹಟಗಾರ ಪತ್ತಿನ ಸಹಕಾರಿ ಸಂಘದ ಮಾಜಿ ಅಧ್ಯಕ್ಷ, ನಾಮದೇವ ಓಣಿಯ ರಹಿವಾಸಿ ನಿಂಗಪ್ಪ ಹೊನವಾಡ ಅವರ ಧರ್ಮಪತ್ನಿ ಗುರುಶಾಂತವ್ವ ತಮ್ಮ 86 ನೆಯ ವಯಸ್ಸಿನಲ್ಲಿ ಜುಲೈ 20 ರಂದು ಸಂಜೆ ನಿಧನರಾದರು.

# ಉಚಿತ ಹೊಲಿಗೆ, ಕೃಷಿ ಉದ್ಯಮ ತರಬೇತಿ

**ಬಾಗಲಕೋಟೆ :** ಹಳಿಯಾಳದ ಕೆನರಾ ಬ್ಯಾಂಕ್ ದೇಶಪಾಂಡೆ ಆರ್‌ಸೆಟ್ ಸಂಸ್ಥೆ ವತಿಯಿಂದ 18 ರಿಂದ 45 ವರ್ಷದೊಳಗಿನ ಗ್ರಾಮೀಣ ಭಾಗದ ನಿರುದ್ಯೋಗಿ ಯುವಕ ಯುವತಿಯರಿಗಾಗಿ ಆಗಸ್ಟ ತಿಂಗಳ ಮೂರನೇ ವಾರದಲ್ಲಿ 30 ದಿನಗಳ ಪುರುಷರ ಹೊಲಿಗೆ ತರಬೇತಿ ಮತ್ತು 13 ದಿನಗಳ ಕೃಷಿ ಉದ್ಯಮ ತರಬೇತಿ ಹಮ್ಮಿಕೊಳ್ಳಲಾಗಿದೆ. ತರಬೇತಿ ಸಂಪೂರ್ಣ ಉಚಿತವಾಗಿದ್ದು, ಆಸಕ್ತರು ಆಗಸ್ಟ 10 ರೊಳಗಾಗಿ ತಮ್ಮ ಹೆಸರು ವಿಳಾಸವನ್ನು ಮೊನಂ.9980510717, 9482188780ಗೆ ಕರೆ ಮಾಡಿ ನೋಂದಾಯಿಸಿಕೊಳ್ಳುವಂತೆ ಆರ್‌ಸೆಟ್ ಸಂಸ್ಥೆ ಪ್ರಕಟಣೆಯಲ್ಲಿ ತಿಳಿಸಿದೆ.

# ರಾಮಪ್ಪ ಕುದರಿ ನಿಧನ



**ಮೂಡಲಗಿ :** ಸಮೀಪದ ರಡ್ಡೇರಟ್ಟಿ ಗ್ರಾಮದ ಮುಖಂಡ ರಾಮಪ್ಪ ಲಕ್ಕಪ್ಪ ಕುದರಿ (71) ಶುಕ್ರವಾರ ನಿಧನರಾದರು.

ಮೃತರು ಪತ್ನಿ, ಪುತ್ರ ಹಾಗೂ ಬಂಧು ಬಳಗವನ್ನು ಅಗಲಿದ್ದಾರೆ.

# ಬಡ್ಡಿ ಸಮೇತ ಠೇವಣಿ ಹಣ ನೀಡಲು ಆದೇಶ

**ಬಾಗಲಕೋಟೆ :** ಸಹಕಾರಿ ಸಂಘದಲ್ಲಿ ಇಟ್ಟಿದ್ದ ಠೇವಣಿ ಹಣ ಮೃತರ ವಾರಸುದಾರರಿಗೆ ನೀಡದೇ ಸತಾಯಿಸುತ್ತಿದ್ದ ಕಿಸಾನ್ ಮಿತ್ರ ಮಲ್ಟಿ ಸ್ಟೇಟ್ ಕೋ-ಆಪರೇಟಿವ್ ಕ್ರೇಡಿಟ್ ಸೊಸೈಟಿಗೆ ಬಡ್ಡಿ ಸಮೇತ ಠೇವಣಿ ಹಣ ನೀಡುವಂತೆ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ ಆದೇಶಿಸಿದೆ.

ಜಮಖಂಡಿ ನಿವಾಸಿ ಪ್ರಕಾಶ ಸಾಬಣ್ಣವರ ಕಿಸಾನ್ ಮಿತ್ರ ಮಲ್ಟಿ ಸ್ಟೇಟ್ ಕೋ-ಆಪರೇಟಿವ್ ಕ್ರೇಡಿಟ್ ಸೊಸೈಟಿಯಲ್ಲಿ ಅಂದಾಜು 47 ಲಕ್ಷ ರೂ.ಗಳ ಠೇವಣಿ ಮಾಡಿದ್ದರು. ಅಲ್ಲದೇ ಉಳಿತಾಯ ಖಾತೆಯಲ್ಲಿ ಜಮೆ ಇದದ 1620 ರೂ.ಗಳು ಮತ್ತು ಆರ್.ಡಿ. ಖಾತೆಯಲ್ಲಿ 75 ಸಾವಿರ ರೂ.ಗಳ ಹಣ ಜಮೆ ಆಗಿತ್ತು. ಖಾತೆದಾರ ಸಾಬಣ್ಣವರ ಮೃತಪಟ್ಟ ಹಿನ್ನಲೆಯಲ್ಲಿ ಅವಧಿ ಮುಗಿದ ನಂತರ ಠೇವಣಿ ಹಣ ವಾಪಸ್ಸು ನೀಡುವಂತೆ ಮೃತನ ಪತ್ನಿ ಸರಸ್ವತಿ ಮತ್ತು ಮಗ ಮಲ್ಲಿಕಾರ್ಜುನ ಮತ್ತು ಮಗಳು ಜ್ಯೋತಿ ಅನೇಕ ಬಾರಿ ವಿನಂತಿಸಿಕೊಂಡರೂ ಕೊಡದೇ ಸತಾಯಿಸಿದ್ದರು.

ಠೇವಣಿ ಹಣ ಮತ್ತು ಉಳಿತಾಯ ಖಾತೆ ಮತ್ತು ಆರ್.ಡಿ ಖಾತೆಯಲ್ಲಿರುವ ಹಣ ಕೊಡಿಸುವಂತೆ ಕೋರಿ ಜಿಲ್ಲಾ ಗ್ರಾಹಕ ವ್ಯಾಜ್ಯಗಳ ಪರಿಹಾರ ಆಯೋಗಕ್ಕೆ ದೂರು ನೀಡಿದ್ದರು. ಈ ಹಿನ್ನಲೆಯಲ್ಲಿ ಆಯೋಗ ವಿಚಾರಣೆ ಮಾಡಿದ್ದು, ಮೃತನ ವಾರಸುದಾರರಿಗೆ ಮರಳಿ ಹಣ ನೀಡದೇ ಸೇವಾ ನ್ಯೂನ್ಯತೆ ಎಸಗಿದ್ದರಿಂದ ಮೃತರಿಗೆ ಬರಬೇಕಾದ ಒಟ್ಟು 47,88,066 ರೂಗಳನ್ನು ಬಡ್ಡಿ ಸಮೇತ ನೀಡುವಂತೆ ಆದೇಶಿಸಿದೆ. ಇದರ ಜೊತೆಗೆ ವಿಶೇಷ ಪರಿಹಾರ 15 ಸಾವಿರ ರೂ, ಹಾಗೂ ಪ್ರಕರಣ ಖರ್ಚು 10 ಸಾವಿರ ನೀಡುವಂತೆ ಆಯೋಗದ ಅಧ್ಯಕ್ಷ ಡಿ.ವೈ.ಬಸಾಪೂರ, ಸದಸ್ಯ ಕಮಲಕಿಶೋರ ಜೋಶಿ ಒಳಗೊಂಡ ಪೀಠವು ತೀರ್ಪು ನೀಡಿದೆ.

# ಬಾಗಲಕೋಟೆ: ಹೈಟೆಕ್ ಹಾರ್ವೆಸ್ಟರ್ ಹಬ್‌ಗೆ ಅರ್ಜಿ ಆಹ್ವಾನ

**ಬಾಗಲಕೋಟೆ :** ಪ್ರಸಕ್ತ ಸಾಲಿನಲ್ಲಿ ಕೃಷಿ ಪರಿಕರಗಳು ಮತ್ತು ಗುಣಮಟ್ಟ ನಿಯಂತ್ರಣ ಯೋಜನೆಯಡಿ ಹೈಟೆಕ್ ಹಾರ್ವೆಸ್ಟರ್ ಹಬ್‌ಗಳನ್ನು ಬೆಳೆಯ ವಿಧ ಮತ್ತು ಕಟಾವು ಅವಧಿಯ ಆಧಾರದ ಮೇಲೆ ಕಾರಿಡಾರ್ ಮಾದರಿಯಲ್ಲಿ ಅನುಷ್ಠಾನ ಮಾಡಲು ಉದ್ದೇಶಿಸಲಾಗಿದೆ.

ಹೈಟೆಕ್ ಹಾರ್ವೆಸ್ಟರ್ ಹಬ್‌ಗಳನ್ನು ಅನುಷ್ಠಾನ ಮಾಡಲು ಚಾಲ್ತಿಯಲ್ಲಿರುವಸಂಸ್ಥೆಗಳು,ವೈಯಕ್ತಿಕಯಂತ್ರಧಾರೇಂದ್ರಗಳು, ಸೇವಾಧಾರ ಫಲಾನುಭವಿಗಳು ಹಾಗೂ ನೋಂದಾಯಿತ ಸಂಘ-ಸಂಸ್ಥೆಗಳು ಭಾಗವಹಿಸಬಹುದಾಗಿರುತ್ತದೆ. ಸಾಮಾನ್ಯ ವರ್ಗದ ರೈತರಿಗೆ ಗರಿಷ್ಟ ಶೇ.50 ರಂತೆ ಹಾಗೂ ಸಂಘ-ಸಂಸ್ಥೆಗಳಿಗೆ ಗರಿಷ್ಟ ಶೇ.70 ರಂತೆ ಸಹಾಯಧನವನ್ನು ನೀಡಲಾಗುವುದು.

ಬಾಗಲಕೋಟೆ ಜಿಲ್ಲೆಗೆ ಒಂದು (1) Combo ಹಾರ್ವೆಸ್ಟರ್ ಹಬ್ (ಸಂಘ/ಸಂಸ್ಥೆಗಳಿಗೆ), ಒಂದು (1) ಕಂಬೈನ್ಡ್ ಹಾರ್ವೆಸ್ಟರ್ ಹಬ್ (ಸಾಮಾನ್ಯ-ವೈಯಕ್ತಿಕ) ಹಾಗೂ ಒಂದು (1) ಕಂಬೈನ್ಡ್ ಹಾರ್ವೆಸ್ಟರ್ ಹಬ್ (ಸಂಘ/ಸಂಸ್ಥೆಗಳಿಗೆ) ಕಾರ್ಯಕ್ರಮವಿದ್ದು, ಜಿಲ್ಲಾ ಮಟ್ಟದ ಉಪಕರಣ ಸಮಿತಿ ಸಭೆಯಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ, ಬಾಗಲಕೋಟೆ ರವರ ಅಧ್ಯಕ್ಷತೆಯಲ್ಲಿ (Expression of Interest) / Request for Proposal/ ನಿಯಮಾನುಸಾರ ಹೈಟೆಕ್ ಹಾರ್ವೆಸ್ಟರ್ ಹಬ್‌ಗಳನ್ನು ನಿರ್ವಹಿಸಲು ಸೇವಾದಾರ ಸಂಸ್ಥೆಗಳ ಫಲಾನುಭವಿಗಳನ್ನು ಆಯ್ಕೆ ಮಾಡಲಾಗುವುದು.

ಹಾರ್ವೆಸ್ಟರ್ ಹಬ್‌ಗಳಿಗೆ ನಿಗದಿಪಡಿಸಿದ ಗರಿಷ್ಟ ಸಹಾಯಧನದ ಮೊತ್ತಕ್ಕೆ ಸೀಮಿತಗೊಳಿಸಿ ಸ್ಥಳೀಯವಾಗಿ ಅಗತ್ಯವಿರುವ ಕೃಷಿ ಯಂತ್ರೋಪಕರಣಗಳನ್ನು ದಾಸ್ತಾನೀಕರಿಸಲು ಪ್ರತಿ ಒಂದು ಕಾಂಬೋ ಹಾರ್ವೆಸ್ಟರ್ ಹಬ್ ಘಟಕಕ್ಕೆ ಗರಿಷ್ಠ ಮೊತ್ತ ರೂ.100 ಲಕ್ಷಗಳು ಮೀರದಂತೆ (ರೂ. 5 ಲಕ್ಷಗಳ ಆಡಳಿತಾತ್ಮಕ ವೆಚ್ಚ ಒಳಗೊಂಡಂತೆ) ಸಹಾಯಧನವನ್ನು ಒದಗಿಸಲಾಗುವುದು. ಪ್ರತಿ "ಕಾಂಬೋ ಹಾರ್ವೆಸ್ಟರ್ ಹಬ್" ನಲ್ಲಿ ಒಂದು ಕಂಬೈನ್ಡ್ ಹಾರ್ವೆಸ್ಟರ್ ಹಾಗೂ ಒಂದು ಶುಗರ್‌ಕೇನ್ ಹಾರ್ವೆಸ್ಟರ್‌ಗಳೊಂದಿಗೆ Baler ಮತ್ತು Inter row Rotavator ದಾಸ್ತಾನೀಕರಿಸುವುದು ಕಡ್ಡಾಯವಾಗಿರುತ್ತದೆ. "ಕಂಬೈನ್ಡ್ ಹಾರ್ವೆಸ್ಟರ್ ಹಬ್" ನಲ್ಲಿ ಕಂಬೈನ್ಡ್ ಹಾರ್ವೆಸ್ಟರ್ ರೊಂದಿಗೆ ಃಚಿಟಜಡಿ ದಾಸ್ತಾನೀಕರಿಸುವುದು ಕಡ್ಡಾಯವಾಗಿರುತ್ತದೆ. ಪ್ರತಿ ಹೈಟೆಕ್ ಹಾರ್ವೆಸ್ಟರ್ ಹಬ್ ಘಟಕಗಳಲ್ಲಿ ಈ ಮೇಲಿನ ಹೈಟೆಕ್ ಯಂತ್ರೋಪಕರಣಗಳನ್ನು ದಾಸ್ತಾನೀಕರಿಸಿ ರೈತರಿಗೆ ಬಾಡಿಗೆ ಆಧಾರದಲ್ಲಿ ಒದಗಿಸಲು ಅವಕಾಶವಿರುತ್ತದೆ. ಹೈಟೆಕ್ ಹಾರ್ವೆಸ್ಟರ್ ಹಬ್‌ಗಳಲ್ಲಿ ದಾಸ್ತಾನೀಕರಿಸುವ ಯಂತ್ರೋಪಕರಣಗಳನ್ನು ಬಾಡಿಗೆ ಆಧಾರದ ಮೇಲೆ Corridor ನಲ್ಲಿ ಬರುವ ರೈತರಿಗೆ ಒದಗಿಸುವುದು. ಕಾರ್ಯಾದೇಶ ನೀಡಿದ ನಂತರ ಖರೀದಿಸಿದ ಯಂತ್ರೋಪಕರಣಗಳಿಗೆ ಮಾತ್ರ ಸಹಾಯಧನವನ್ನು ನೀಡಲಾಗುವುದು.

ಅರ್ಜಿದಾರರು ಇಚ್ಛಿಸುವ ಹಬ್‌ಗೆ ಅರ್ಜಿ ನಮೂನೆಯಲ್ಲಿ, ನೋಂದಾಯಿಸಿದ ಸಂಸ್ಥೆ ಪ್ರಮಾಣ ಪತ್ರ, ಪಹಣಿ, ಗುರುತಿನ ಪತ್ರ, ಬ್ಯಾಂಕ್ ಖಾತೆ ಸಂಖ್ಯೆ, 20 ರೂ.ಗಳ ಛಾಪಾ ಕಾಗದದ ಮೇಲೆ ಹಬ್ ಅನ್ನು ಪರಭಾರೆ ಮಾಡುವುದಿಲ್ಲವೆಂದು ಮುಚ್ಚಳಿಕೆ ಪತ್ರ, 2 ವರ್ಗಗಳ ಲೆಕ್ಕ ಪರಿಶೋಧನಾ ಪತ್ರ, ಸಕ್ಕರೆ ಕಾರ್ಖಾನೆಗಳಿಂದ ಕಬ್ಬು ಕಟಾವಿಗೆ ಮಾಡಿಕೊಂಡ ಲಿಖಿತ ಒಪ್ಪಂದ ಪ್ರಮಾಣ ಪತ್ರ ಹಾಗೂ ಸಹಾಯಧನವು Credit Linked Back ended subsidy ಆಗಿರುವುದರಿಂದ ಸಂಬಂಧಿಸಿದ Nationalized Bank/Scheduled Bank ಗಳಿಂದ "ತಾತ್ವಿಕ ಸಾಲ ಮಂಜೂರಾತಿ ಪತ್ರ" ವನ್ನು ಸಂಬಂಧಿಸಿದ ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರ ಕಛೇರಿಯಲ್ಲಿ ಸಲ್ಲಿಸುವುದು. ಕೃಷಿ ಯಂತ್ರಧಾರೆ ಕೇಂದ್ರಗಳ, ಸಹಕಾರ ಸಂಘಗಳ ನಿಬಂಧನೆಯಂತೆ, ಕಂಪನಿ ಕಾಯ್ದೆಯಡಿ ನೋಂದಾಯಿಸಿದ ಸಂಘ-ಸಂಸ್ಥೆಗಳು ಮಾತ್ರ ಅರ್ಹತೆಯನ್ನು ಹೊಂದಿರುತ್ತವೆ. ಅರ್ಜಿ ಸಲ್ಲಿಸಲು ಆಗಸ್ಟ 14 ಕೊನೆಯ ದಿನವಾಗಿರುತ್ತದೆ ಎಂದು ಜಂಟಿ ಕೃಷಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ದೂರದೃಷ್ಟಿ ಮುಂಗಡ ಪತ್ರ



**ರಬಕವಿ :** ಬಹುನಿರೀಕ್ಷಿತ ಕೇಂದ್ರದ ಪೂರ್ಣ ಪ್ರಮಾಣದ ಬಜೆಟ್ನ್ನು ಇಂದು ವಿತ್ತ ಸಚಿವೆ ಶ್ರೀಮತಿ ನಿರ್ಮಲಾ ಸೀತಾರಾಮನ್ ಅವರು ಮಂಡಿಸಿದ್ದಾರೆ. ಈ ಬಜೆಟ್ ಹಲವು ವಿಭಾಗಗಳ ಮೊಗದಲ್ಲಿ ಮಂದಹಾಸ ಮೂಡಿಸಿದರೆ, ಇನ್ನು ಹಲವು ಕ್ಷೇತ್ರಗಳ ಚಿಂತೆಯನ್ನು ದುಪ್ಪಟ್ಟು ಮಾಡಿದೆ. ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ತಮ್ಮ ಬಜೆಟ್ ಭಾಷಣದಲ್ಲಿ ನಾಲ್ಕು ಪ್ರಮುಖ ಅಂಶಗಳನ್ನು ಪ್ರಸ್ತಾಪಿಸಿದ್ದಾರೆ. ಬಡವರು, ಯುವ ಜನತೆ, ರೈತರು ಮತ್ತು ಮಹಿಳೆಯರ ಕಲ್ಯಾಣಕ್ಕೆ ಹೆಚ್ಚಿನ ಒತ್ತು ನೀಡಲಾಗಿದೆ. ಉದ್ಯೋಗದ ಮೇಲೆ ಒತ್ತು ನೀಡಲು ಐದು ಯೋಜನೆಗಳನ್ನು ಘೋಷಿಸಿದ್ದು, 4.1 ಕೋಟಿ ಯುವಕರ ಉದ್ಯೋಗ ಮತ್ತು ಕೌಶಲ್ಯದ ಐದು ಯೋಜನೆಗಳಿಗೆ ಎರಡು ಲಕ್ಷ ಕೋಟಿ ಪ್ಯಾಕೇಜ್ ಘೋಷಿಸಲಾಗಿದೆ. ಉದ್ಯೋಗ, ಕೌಶಲ, ಎಸ್‌ಎಂಇಗಳು ಮತ್ತು ಮಧ್ಯಮ ವರ್ಗದ ಮೇಲೆ ಒತ್ತು ನೀಡಲಾಗಿದೆ. ಶಿಕ್ಷಣ, ಉದ್ಯೋಗ ಮತ್ತು ಕೌಶಲ್ಯಕ್ಕಾಗಿ 1.48 ಲಕ್ಷ ರೂಪಾಯಿಗಳನ್ನು ಮೀಸಲಿಡಲಾಗಿದೆ. ಇನ್ನು ದೇಶದಲ್ಲಿನ ಶಿಕ್ಷಣ, ಉದ್ಯೋಗ, ಜನಸಂಖ್ಯೆ ಮುಂತಾದ ಸಮಸ್ಯೆಗಳ ಬಗ್ಗೆ ದೂರದೃಷ್ಟಿ ಇಟ್ಟುಕೊಂಡಿದ್ದರೆ ಚೆನ್ನಾಗಿರುತ್ತಿತ್ತು. ನನ್ನ ದೃಷ್ಟಿಯಲ್ಲಿ ಇದೊಂದು ದೂರದೃಷ್ಟಿ ಮುಂಗಡ ಪತ್ರವಾಗಿದೆ.

**- ಪ್ರೊ. ರಾಜೇಶ ನೋಟದ**
**ಅರ್ಥಶಾಸ್ತ್ರ ಉಪನ್ಯಾಸಕರು**
**ಎಂ. ವ್ಹಿ. ಪಟ್ಟಣ ಪ.ಪೂ. ಕಾಲೇಜ, ರಬಕವಿ.**

# ಆಶಾದಾಯಕ ಬಜೆಟ್



**ಜಮಖಂಡಿ :** ಕೇಂದ್ರ ಸರ್ಕಾರದ ಬಜೆಟ್ಟಿನಲ್ಲಿ ಚಿನ್ನದ ಬೆಲೆ ಇಳಿಕೆ ಹಾಗೂ ಕ್ಯಾನ್ಸರ್ ಚಿಕಿತ್ಸೆಗೆ ಬಳಸುವ ಔಷಧಿಗಳ ಬೆಲೆ ಇಳಿಕೆ ಮಹಿಳೆಯರಿಗೆ ಸಂತೋಷ ತಂದಿದೆ. ಯುವಕರಿಗೆ 500 ಕಂಪನಿಗಳಲ್ಲಿ ಇಂಟರ್ನ್ ಶಿಪ್ ಮಾಡಲು ಅವಕಾಶ ನೀಡಿ ಪ್ರತಿ ತಿಂಗಳು 5,000 ರೂ ನೀಡಿದ್ದು, ಯುವಕರಿಗೆ ಉತ್ಸಾಹ ತಂದಿದೆ. ಒಟ್ಟಾರೆ ಬಜೆಟ್ ಎಲ್ಲರಲ್ಲಿ ಆಶಾ ಭಾವನೆ ಮೂಡಿಸಿದೆ ಎಂದು ಡಾ. ವಿಜಯಲಕ್ಷ್ಮಿ ತುಂಗಳ, ರಾಜ್ಯ ಉಪಾಧ್ಯಕ್ಷರು ಬಿಜೆಪಿ ಮಹಿಳಾ ಮೋರ್ಚಾ ಅವರು ತಿಳಿಸಿದರು.

# ಸರ್ವ ಕ್ಷೇತ್ರಗಳ ಅಭಿವೃದ್ಧಿ ಪರ ಬಜೆಟ್: ಪೂಜಾರ



**ಬಾಗಲಕೊಟೆ :** ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಮಂಡಿಸಿದ ಬಜೆಟ್ ವಿಕಸಿತ ಭಾರತದ ದಿಕ್ಸೂಚಿ0ಯಾಗಿದೆ ಎಂದು ಮೇಲ್ಮನೆ ಸದಸ್ಯ ಪಿ.ಎಚ್.ಪೂಜಾರ್ ತಿಳಿಸಿದ್ದಾರೆ.

ಕೇಂದ್ರದ ಬಜೆಟ್ ಕುರಿತು ಪ್ರತಿಕ್ರಿಯಿಸಿರುವ ಅವರು ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರು ಸತತ 7ನೇ ಬಾರಿಗೆ ಬಜೆಟ್ ಮಂಡಿಸುವ ಮೂಲಕ ದಾಖಲೆ ಬರೆದಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದ 3.0 ವಿಕಸಿತ ಭಾರತ ಬಜೆಟ್ 2024-25 ರಲ್ಲಿ ರೈತರು, ಬಡವರ ಹಾಗೂ ಮಹಿಳೆ0ಯುರು ಸೇರಿದಂತೆ ಎಲ್ಲ ಕ್ಷೇತ್ರಗಳಿಗೆ ಆದ್ಯತೆ ನೀಡಿದ್ದಾರೆ. ಸಾಮಾಜಿಕ ನ್ಯಾ0ು, ಉದ್ಯೋಗ, ಉತ್ಪಾದನೆ ಹಾಗೂ ಸೇವಾ ಕ್ಷೇತ್ರ ಸುಧಾರಣೆಗಳು ಸೇರಿದಂತೆ ಆಧ್ಯತೆ ನೀಡಲಾಗಿದೆ. ಹೊಸ ಆದಾ0ು ತೆರಿಗೆ ಮಿತಿ0ುಲ್ಲಿ ಆದಾ0ು ತೆರಿಗೆ ಪಾವತಿದಾರರಿಗೆ ತೆರಿಗೆ ಬಾರ ಕಡಿಮೆ0ುಾಗಿರುವುದು ಮಧ್ಯಮ ಜನರಿಗೆ ಅನುಕೂಲವಾಗಲಿದೆ. ಕೃಷಿ ಕ್ಷೇತ್ರಕ್ಕೆ 1.52 ಲಕ್ಷ ಕೋಟಿ ರೂ ಅನುದಾನ ಮಿಸಲಿಡಲಾಗಿದ್ದು, ಮಹಿಳಾ ಸಬಲೀಕರಣಕ್ಕೆ 3 ಲಕ್ಷ ಕೋಟಿ, ಗ್ರಾಮೀಣಾಭಿವೃದ್ಧಿಗೆ 2.66 ಲಕ್ಷ ಕೋಟಿ, ಉಚಿತ ಪಡಿತರ 0ುೋಜನೆ 2029ರ ವರೆಗೆ ಮುಂದುವರಿಸಿ ಪ್ರಧಾನಮಂತ್ರಿ ಗರೀಬ್ ಕಲ್ಯಾಣ ಅನ್ನ 0ುೋಜನೆ 5 ವರ್ಷ ವಿಸ್ತರಣೆ ಮಾಡುವ ಮೂಲಕ ಬಡವರ ಬಗೆಗಿನ ಕಾಳಜಿ ವ್ಯಕ್ತ ಪಡಿಸಿದ್ದು ಅಭಿನಂದನಾರ್ಹ ಎಂದು ಅವರು ತಿಳಿಸಿದ್ದಾರೆ.

# "ಮುಖಗುರುತಿಸುವಿಕೆಯ ಹಾಜರಾತಿ ಯೋಜನೆ ಸ್ವಾಗತಾರ್ಹ"

ರಾಜ್ಯಸರಕಾರ ಶಿಕ್ಷಣ ಇಲಾಖೆಯಲ್ಲಿ ಎಲ್‌ಕೆಜಿಯಿಂದ 12ನೇ ತರಗತಿವರೆಗಿನ ವಿದ್ಯಾರ್ಥಿಗಳ ಹಾಜರಾತಿ ಪ್ರಕ್ರಿಯೆಯನ್ನು ಡಿಜಿಟಲೀಕರಣಗೊಳಿಸಲು ಮುಂದಾಗಿರುವ ಸರಕಾರದ ಈ ಮಹತ್ವದ ತೀರ್ಮಾನ ಪ್ರಸ್ತುತ ಶೈಕ್ಷಣಿಕ ವ್ಯವಸ್ಥೆಯಲ್ಲಿ ಇದೊಂದು ಕ್ರಾಂತಿಕಾರಿ ಹೆಜ್ಜೆಯಾಗಿದೆ. ಇದೀಗ "ಮುಖ ಗುರುತಿಸುವಿಕೆಯ ಹಾಜರಾತಿ" ಪ್ರಕ್ರಿಯೆ ಆರಂಭಕ್ಕೆ ಸರಕಾರ ಸನ್ನದ್ಧರಾಗಿರುವುದು ಶಿಕ್ಷಣ ಇಲಾಖೆಯಲ್ಲಿ ಅಮೂಲಾಗ್ರವಾಗಿ ಪರಿವರ್ತನೆಗೊಳಪಡಿಸುವ ಮಹೋನ್ನತ ಉದ್ದೇಶ ನಿಜಕ್ಕೂ ಆಶಾದಾಯಕವಾಗಿದೆ.

ನೆರೆಯಚೆನ್ನೈದಲ್ಲಿಈಯೋಜನೆಫಲಕಾರಿಯಾಗಿದ್ದನ್ನು ಮನಗಂಡು ಪ್ರಾಯೋಗಿಕವಾಗಿ ಸದ್ಯ ರಾಜ್ಯದಲ್ಲಿ "ಮುಖ ಗುರುತಿಸಿ ಹಾಜರಾತಿ ಪ್ರಕ್ರಿಯೆ" ಆರಂಭ ಮಾಡಲು ಸರಕಾರ ಪೂರ್ಣ ಸಿದ್ಧತೆ ನಡೆಸಿರುವುದು ಸ್ವಾಗತಾರ್ಹ ಹಾಗೂ ಔಚಿತ್ಯಪೂರ್ಣವಾಗಿದೆ. ಸರಕಾರಿ ಶಾಲೆಗಳಲ್ಲಿ ಮಕ್ಕಳ ಹಾಜರಾತಿಯನ್ನು ಹೆಚ್ಚಳಗೊಳಿಸಲು ಈ ವಿಶಿಷ್ಟ ಯೋಜನೆಯ ಮೂಲಕ ಸಾಕಾರಗೊಳಿಸಲು ಸರ್ಕಾರ ದಿಟ್ಟ ಹೆಜ್ಜೆ ಇಟ್ಟಿದ್ದು ಗಮನಾರ್ಹ. ಸರಕಾರಿ ಶಾಲೆಯಲ್ಲಿ ದಾಖಲಗೊಂಡ ಸಂಪೂರ್ಣ ಎಲ್ಲ ಮಕ್ಕಳಿಗೂ ಗುಣಮಟ್ಟದ ಶಿಕ್ಷಣ ನೀಡಿ ಸರಕಾರಿ ಶಾಲೆಗಳ ಸಮಗ್ರ ಅಭಿವೃದ್ಧಿಗೆ ಮನಃಪೂರ್ವಕವಾಗಿ ದೀಕ್ಷೆ ತೊಟ್ಟು ಪ್ರಾಮಾಣಿಕವಾಗಿ ಕಾರ್ಯ ಪ್ರವರ್ತವಾಗಿದ್ದು ಒಂದು ಆರೋಗ್ಯಕರ ಬೆಳವಣಿಗೆ. ದುಂದು ವೆಚ್ಚಕ್ಕೆ ಪೂರ್ಣ ಕಡಿವಾಣ ಹಾಕಿ ಇಲ್ಲಿಯವರೆಗೆ ಶಾಲೆಗಳಲ್ಲಿ ಗೈರು ಇರುತ್ತಿದ್ದ ಹಲವು ವಿದ್ಯಾರ್ಥಿಗಳ ಹೆಸರಿನಲ್ಲಿ ಈ ಹಿಂದೆ ನಿರಂತರವಾಗಿ ನಡೆಯುತ್ತಿದ್ದ ಹತ್ತು ಹಲವು ಅಕ್ರಮ ಅವ್ಯವಹಾರಗಳಿಗೆ ಈ ಹೊಸ ಯೋಜನೆಯು ಪ್ರಬಲ ತಡೆಗೋಡೆಯಾಗುವುದರಲ್ಲಿ ಎರಡು ಮಾತಿಲ್ಲ. ಪ್ರಸ್ತುತ ಸರಕಾರದ ಯೋಜನೆಗಳೆಲ್ಲವೂ ಆಕರ್ಷಕವಾಗಿ ಜನ ಮನ ಸೆಳೆಯುತ್ತ ಕೇಳಲು ಕಿವಿಗೆ ಬಹಳ ಹಿತ ಎನಿಸುತ್ತವೆ. ಆದರೆ ಶಿಕ್ಷಣ ಇಲಾಖೆಯ ಸಂಬಂಧಪಟ್ಟ ಮೇಲಾಧಿಕಾರಿಗಳು, ಹಾಗೂ ಶಿಕ್ಷಕರು ಇದರ ಸಂಪೂರ್ಣ ಅನುಷ್ಠಾನಕ್ಕೆ ಮೊಟ್ಟ ಮೊದಲು ತೀವ್ರ ಕಾಳಜಿ ವಹಿಸಿ ಪರಮಾಧ್ಯತೆ ನೀಡಿದಾಗ ಮಾತ್ರ ಸರಕಾರದ ಈ ಮಹತ್ವಾಕಾಂಕ್ಷಿ ಯೋಜನೆಯ ಶೈಕ್ಷಣಿಕ ಆಶಯ ಫಲಕಾರಿಯಾದೀತು!!

**ಅಭಿಮತ : ಡಾ. ಜಯವೀರ ಎ. ಕೆ.**
**ಕನ್ನಡ ಪ್ರಾಧ್ಯಾಪಕರು, ಖೇಮಲಾಪುರ**

# ಸಚಿವರಿಗೆ ಮನವಿ ಸಲ್ಲಿಸಿದರು ಪ್ರಯೋಜನ ಆಗಿಲ್ಲ ಸೋರುತ್ತಿರುವ ದಾಸರಟ್ಟಿ ಸರಕಾರಿ ಶಾಲಾ ಕೊಠಡಿಗಳು ಶಾಲೆಯಿಂದ ದೂರ ಉಳಿದ ವಿದ್ಯಾರ್ಥಿಗಳು!



**ತೇರದಾಳ :** ಇಲ್ಲಿನ ದಾಸರಟ್ಟಿ ಸರಕಾರಿ ಕಿರಿಯ ಪ್ರಾಥಮಿಕ ಶಾಲೆಯ ಕೊಠಡಿಗಳು ಸಂಪೂರ್ಣ ಶಿಥಲಗೊಂಡು ಮಳೆಗೆ ಸೋರುತ್ತಿವೆ. ಇದರಿಂದ ಭಯಗೊಂಡಿರುವ ವಿದ್ಯಾರ್ಥಿಗಳು ಶಾಲೆಗೆ ಬರುವುದನ್ನೆ ನಿಲ್ಲಿಸಿದ್ದಾರೆ. ಅಲ್ಪ ಪ್ರಮಾಣದಲ್ಲಿ ಬರುವ ಮಕ್ಕಳನ್ನು ಕೊಠಡಿಗಳ ಮುಂದೆ ಕೂಡಿಸಿ ಪಾಠ ಮಾಡಬೇಕಾದ ಸ್ಥಿತಿ ಶಿಕ್ಷಕರಿಗೆ ಎದುರಾಗಿದೆ.

ಹೌದು. ಇತ್ತಿಚೆಗೆ ವಿದ್ಯುತ್ ತಂತಿ ಹರಿದು ಬಿದ್ದ ಪರಿಣಾಮದಿಂದ ಇಬ್ಬರ ಪ್ರಾಣ ಕಳೆದುಕೊಂಡಿರುವುದನ್ನು ಇಲ್ಲಿನ ದಾಸರಟ್ಟಿಯ ಜನ ಇನ್ನೂ ಮರೆತಿಲ್ಲ. ಮೃತರಿಗೆ ಪರಿಹಾರ ಚೆಕ್ ವಿತರಣೆಗೆ ಆಗಮಿಸಿದ್ದ ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ. ತಿಮ್ಮಾಪುರ ಅವರಿಗೆ ದಾಸರಟ್ಟಿಯಲ್ಲಿನ ಸರಕಾರಿ ಶಾಲೆಯ ದು:ಸ್ಥಿತಿ ಬಗ್ಗೆ ಮನವಿ ಸಲ್ಲಿಸಿ ಕೂಡಲೇ ಕ್ರಮ ಕೈಗೊಳ್ಳುವಂತೆ ಬೇಡಿಕೊಂಡಿದ್ದರು. ಆದರೆ ಇನ್ನೂ ಶಾಲೆಯ ದುರಸ್ತಿಗೆ ಕ್ರಮ ಕೈಗೊಳ್ಳದ ಕಾರಣ ಈಗ ಸುರಿಯುತ್ತಿರುವ ಜಿಟಿ ಜಿಟಿ ಮಳೆಗೆ ಶಾಲಾ ಕೊಠಡಿಗಳು ಸಂಪೂರ್ಣ ಸೋರುತ್ತಿವೆ. ಅಲ್ಲದೆ ಸಿಮೆಂಟಿನ ಮೇಲ್ಛಾವಣಿ ದಿನೇ ದಿನೆ ಕತ್ತರಿಸಿ ಬೀಳುತ್ತಿದೆ. ಇದರಿಂದ ಭಯೊಂಡಿರುವ ಮಕ್ಕಳ ಪಾಲಕರು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸಲು ಹಿಂದೇಟು ಹಾಕುತ್ತಿದ್ದಾರೆ. ಮೊನ್ನೆಯಷ್ಟೇ ನಮ್ಮ ದಾಸರಟ್ಟಿಯಲ್ಲಿ ದುರ್ಘಟನೆ ನಡೆದಿದೆ. ಈಗ ಶಾಲೆಯ ಕಟ್ಟದ ಹಾಳಾಗಿದೆ. ಮಕ್ಕಳು ಕೊಠಡಿಯಲ್ಲಿ ಕುಳಿತಾಗ ಏನಾದರು ಅನಾಹುತ ಸಂಭವಿಸಿದರೆ ಏನು ಗತಿ ಯಾರು ಹೊಣೆ ಎಂದು ಆತಂಕಗೊಂಡು ಮಕ್ಕಳನ್ನು ಶಾಲೆಗೆ ಕಳುಹಿಸುವುದನ್ನೆ ಬಿಟ್ಟಿದ್ದಾರೆ. 105 ಮಕ್ಕಳ ಪೈಕಿ ಬೆರಳಣಿಕೆಯಷ್ಟು ಮಕ್ಕಳು ಮಾತ್ರ ಶಾಲೆಗೆ ಬರುತ್ತಿದ್ದು, ಅವರನ್ನು ಕೊಠಡಿಗಳ ಮುಂದೆ ನೆಲದ ಮೇಲೆ ಕೂಡಿಸಿ ಪಾಠ ಮಾಡುತ್ತಿದ್ದಾರೆ. ಹೆಚ್ಚಿನ ಅನಾಹುತ ಸಂಭವಿಸುವ ಮೊದಲು ಶಿಕ್ಷಣ ಇಲಾಖೆ ಕೂಡಲೇ ಈ ಬಗ್ಗೆ ಅಗತ್ಯ ಕ್ರಮ ಕೈಗೊಂಡು ದಾಸರಟ್ಟಿ ಸರಕಾರಿ ಶಾಲೆ ಕೊಠಡಿಗಳನ್ನು ದುರಸ್ತಿಗೊಳಿಸಬೇಕೆಂದು ಅಲ್ಲಿನ ನಿವಾಸಿಗಳು ಆಗ್ರಹಿಸಿದ್ದಾರೆ.

# ನಿವೃತ್ತ ಯೋಧನಿಗೆ ಸನ್ಮಾನ



**ಬನಹಟ್ಟಿ :** ಯೋಧರು ದೇಶದ ಸಂಪತ್ತು. ಅವರಲ್ಲಿರುವ ದೇಶಾಭಿಮಾನ ಭದ್ರತೆಗೆ ಸಾಕ್ಷಿಯಾಗಿದೆ. ದೇಶದ ರಕ್ಷಣೆಗಾಗಿ ತಮ್ಮ ಪ್ರಾಣವನ್ನೇ ಪಣಕ್ಕಿಟ್ಟು ಹೋರಾಡುವ ಅವರ ತ್ಯಾಗ ಮನೋಭಾವ ಎಂದಿಗೂ ಮರೆಯಲಾಗದೆಂದು ಬಸವರಾಜ ಬೆಳಗಲಿ ಹೇಳಿದರು.

ನಗರದ ಶಂಕರಲಿಂಗ ದೇವಸ್ಥಾನ ಆವರಣದಲ್ಲಿ ಹಮ್ಮಿಕೊಂಡಿದ್ದ ನಿವೃತ್ತಿ ಹೊಂದಿದ ಯೋಧ ಲಕ್ಷ್ಮಣ ಕರಂಡೆಯವರ ಸನ್ಮಾನ ಸಮಾರಂಭದಲ್ಲಿ ಅವರು ಮಾತನಾಡಿದರು.

ಡಾ. ಶ್ರೀನಾಥ ಖಮಿತ್ಕರ ಮಾತನಾಡಿ, ಹದಿನೆಂಟು ವರ್ಷಗಳವರೆಗೆ ಭಾರತೀಯ ಸೇನೆಯಲ್ಲಿ ಗಡಿ ಭದ್ರತಾ ಪಡೆಯಲ್ಲಿ ಸೇವೆ ಸಲ್ಲಿಸಿ ನಿವೃತ್ತಿ ಪಡೆದಿದ್ದಾರೆ. ಇಂಥವರ ಮಾರ್ಗದರ್ಶನದ ಮೂಲಕ ಮತ್ತಷ್ಟು ಯುವಕರು ಸ್ಫೂರ್ತಿದಾಯಕರಾಗಿ, ಸೇನೆಯ ಬಲಿಷ್ಠತೆಗೆ ಸನ್ನದ್ಧರಾಗಬೇಕೆಂದರು.

ಗಜಾನನ ಉತ್ಸವ ಸಮಿತಿಯ ಬಸವರಾಜ ಅಮಟಿ, ರಾಜು ಸಗರಿ, ರಾಮಣ್ಣ ಬಳಗಾರ, ರವೀಂದ್ರ ಭೂತಿ, ನಿಂಗಯ್ಯ ಮುಧೋಳಮಠ, ಸುಭಾಸ ಫಕೀರಪುರ, ಈರಣ್ಣ ಜುಂಜಪ್ಪನವರ, ಗಂಗಯ್ಯ ಹಿರೇಮಠ, ಶಿವಯ್ಯ ಹಿರೇಮಠ, ಶಿವು ಶಿರಹಟ್ಟಿ, ಭೀಮಶಿ ಬೆಳಗಲಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ಜಾನಪದ ಸಂಸ್ಕೃತಿ, ಸೊಗಡು ಶ್ರೇಷ್ಠವಾದುದು



**ರಬಕವಿ-ಬನಹಟ್ಟಿ :** ನಮ್ಮ ಪ್ರತಿಯೊಂದು ಸಾಹಿತ್ಯದ ಮೂಲ ಬೇರು ಜಾನಪದ ಸಾಹಿತ್ಯ. ನಮ್ಮ ಬಹಳಷ್ಟು ಆಚರಣೆಗಳು, ರೀತಿ ನೀತಿಗಳು, ಆಚಾರ, ವಿಚಾರಗಳು, ಮಾತುಗಳು, ಹಬ್ಬಗಳು, ಆಹಾರ ಪದ್ಧತಿ, ಕ್ರೀಡೆಗಳಿಗೆ ಜಾನಪದವೇ ಮೂಲ ಬೇರಾಗಿದೆ. ಇಂಥ ಜಾನಪದ ಸಾಹಿತ್ಯವನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ವಿದ್ಯಾರ್ಥಿಗಳು ಗಮನ ನೀಡಬೇಕು ಎಂದು ಸ್ಥಳೀಯ ಎಸ್. ಟಿ. ಸಿ. ಕಾಲೇಜಿನ ಕನ್ನಡ ಉಪನ್ಯಾಸಕ ವೆಂಕಟೇಶ ಕುಲಕರ್ಣಿ ತಿಳಿಸಿದರು.

ಸೋಮವಾರ ಸಮೀಪದ ಯಲ್ಲಟ್ಟಿಯಲ್ಲಿ ತಮ್ಮಣ್ಣಪ್ಪ ಚಿಕ್ಕೋಡಿ ಕಾಲೇಜು ಹಮ್ಮಿಕೊಂಡ ವಿಶೇಷ ಶಿಬಿರದಲ್ಲಿ ಜಾನಪದ ಸೊಗಡು ಕುರಿತು ಉಪನ್ಯಾಸ ನೀಡಿದರು.

ಜಮಖಂಡಿಯ ಬಿ. ಎಲ್. ಡಿ. ಇ. ಸಂಸ್ಥೆಯ ಉಪನ್ಯಾಸಕ ಸದಾಶಿವ ಮಾದರ ಮಾತನಾಡಿ, ಪ್ರತಿಯೊಬ್ಬ ಮಾನವ ಜಗತ್ತಿಗೆ ಜ್ಯೋತಿಯಾಗಬೇಕು ಎಂಬುದು ಜಾನಪದರ ಆಶಯವಾಗಿತ್ತು. ಭಾರತೀಯ ಸಂಸ್ಕೃತಿ ನೆಲೆ ನಿಂತಿರುವುದು ಜಾನಪದರ ಮೇಲೆ. ಜಾನಪದರ ಆಹಾರ ಪದ್ಧತಿ ಕೂಡಾ ಶ್ರೇಷ್ಠವಾದುದು. ಜಾನಪದರ ಹಾಡು, ನುಡಿಗಳು ಇಂದಿಗೂ ಪ್ರಸ್ತುತವಾಗಿವೆ. ಆದ್ದರಿಂದ ವಿದ್ಯಾರ್ಥಿಗಳು ವಿದೇಶಿ ವ್ಯಾಮೋಹಕ್ಕೆ ಒಳಗಾಗದೆ ನಮ್ಮ ದೇಸಿ ಸಾಹಿತ್ಯವನ್ನು ಅಧ್ಯಯನ ಮಾಡುವುದರ ಜೊತೆಗೆ ಅದನ್ನು ಉಳಿಸಿ ಬೆಳೆಸಿ ಮುಂದಿನ ಪೀಳಿಗೆಗೆ ನೀಡಬೇಕು ಎಂದರು.

ಸಂಯೋಜನಾಧಿಕಾರಿಗಳಾದ ಮನೋಹರ ಶಿರಹಟ್ಟಿ, ಸುರೇಶ ನಡೋಣಿ ಮಾತನಾಡಿದರು.

ಜನತಾ ಶಿಕ್ಷಣ ಸಂಘದ ಆಡಳಿತ ಮಂಡಳಿಯ ಸದಸ್ಯ ಗಂಗಾಧರ ಕೊಕಟನೂರ, ಸುರೇಶ ಸಂತಿ, ಸತ್ಯಪ್ಪ ಗುಬ್ಬಿ, ರೇಷ್ಮಾ ಗಜಾಕೋಶ, ಅವಿನಾಶ ಹಟ್ಟಿ, ರತ್ನಾ ಪಾಟೀಲ, ಅಶ್ವಿನಿ ಮಳಲಿ, ಜ್ಯೋತಿ ಮಂಟೂರ, ವಿಶ್ವಜ ಕಾಡದೇವರ ಸೇರಿದಂತೆ ಅನೇಕರು ಭಾಗವಹಿಸಿದ್ದರು.

# ಖಾಸ್ಗತರ ಗಂಗಸ್ಥಳದಲ್ಲಿ ಸಾಗರೋಪಾದಿಯಲ್ಲಿ ಭಕ್ತಸಮೂಹ

**ತಾಳಿಕೋಟೆ:** ಶ್ರೀಖಾಸ್ಗತಮಹಾಶಿವಯೋಗಿಗಳ ಜಾತ್ರೋತ್ಸವ ನಿಮಿತ್ಯ ಶುಕ್ರವಾರರಂದು ಜರುಗಿದ ಶ್ರೀ ಖಾಸ್ಗತ ಮಹಾಶಿವಯೋಗಿಗಳ ಗಂಗಸ್ಥಳ ಹಾಗೂ ಶ್ರೀಗಳ ಭವ್ಯ ಮೆರಣಿಗೆಯ ಮಹಾ ಕಾರ್ಯಕ್ರಮವು ಶ್ರೀ ಮಠದ ನೂತನ ಪೀಠಾಧಿಪತಿ ಶ್ರೀ ಸಿದ್ದಲಿಂಗದೇವರ ಅಧ್ಯಕ್ಷತೆಯಲ್ಲಿ ಭಕ್ತಿಭಾವದಿಂದ ಜರುಗಿ ಭಾವೈಕ್ಯತೆಗೆ ಸಾಕ್ಷೀಯಾಯಿತು.

ಮುಂಜಾನೆ 8 ಘಂಟೆಗೆ ಶ್ರೀ ಖಾಸ್ಗತ ಮಠದಿಂದ ಆನೆ ಅಂಬಾರಿ ಮೇಲೆ ಶ್ರೀ ಖಾಸ್ಗತರ ಬೆಳ್ಳಿಯ ಮಹಾಮೂರ್ತಿಯ ಮಹಾ ಮೆರವಣಿಗೆ, ಶ್ರೀ ವಿರಕ್ತಮಹಾಸ್ವಾಮಿಗಳ ಭಾವಚಿತ್ರದ ಭವ್ಯ ಮೆರವಣಿಗೆಅಲ್ಲದೇಅಶ್ವಮೇದಬೆಳ್ಳಿಯರಥದಲ್ಲಿ ಕುಳಿತಶ್ರೀಮಠದನೂತನಪೀಠಾಧಿಪತಿಯಾದ ಶ್ರೀ ಸಿದ್ದಲಿಂಗದೇವರು ಅಲ್ಲದೇ ಪಲ್ಲಕ್ಕಿ ಹಾಗೂ ರಥದಕಳಸದಮಹಾಮೆರವಣಿಗೆಯುಪಟ್ಟಣದ ಪ್ರಮುಖ ಬಡಾವಣೆಯಲ್ಲಿ ಹಾಯ್ದು ಪುರಾತನ ಭಾವಿಯಾದ ಭೀಮನಭಾವಿಯಲ್ಲಿ ಗಂಗಸ್ಥಳ ಮಹಾ ಕಾರ್ಯಕ್ರಮ ಮುಗಿಸಿಕೊಂಡು ಮೆರವಣಿಗೆಯುಪಟ್ಟಣದಪ್ರಮುಖಬೀದಿಯಲ್ಲಿ ಹಾಯ್ದು ಶ್ರೀಮಠ ತಲುಪಿತು.

ಈ ಗಂಗಸ್ಥಳ ಉತ್ಸವ ನಿಮಿತ್ಯ ಯಾವದೇ ಜಾತಿಬೇಧವೆನ್ನದೇ ಸುಮಂಗಲೆಯರು ತಮ್ಮ ಮನೆಯ ಅಂಗಳದಲ್ಲಿ ರಂಗೋಲಿ ವಿವಿಧ ನಮೂನೆಯ ಚಿತ್ರವನ್ನು ಬಿಡಿಸಿದ್ದಲ್ಲದೇ ಮನೆ ಮನೆಗೆ ತಳಿರು ತೋರಣ ಕಟ್ಟಿ ಈ ಮಹಾ ಮಹಾತ್ಮರ ಭವ್ಯ ಮರವಣಿಗೆಯನ್ನು ಸ್ವಾಗತಿಸಿರುವದು ಇಡೀ ಭಕ್ತಸಮೂಹಕ್ಕೆ ಆನಂದವನ್ನುಂಟುವಮಾಡಿದ್ದು ಕಂಡಿಬಂದಿತು.

ಕಲಾ ತಂಡಗಳಿಂದ ಐತಿಹಾಸಿಕ ಮೆರಗು:

ಅಂಭಾರಿಯ ಮೇರಣಿಗೆಯುದ್ದಕ್ಕೂ ವಿವಿಧ ವಾಧ್ಯವೈಭವಗಳು ಅಲ್ಲದೇ ಗೊಂಬೆ ಕುಣಿತ, ಕರಡಿ ಮಜಲು, ಸನಾದಿಯ ನಾದ, ಶ್ರೀ ಹನುಮಾನವೇಷದಾರಿಯಕುಣಿತಒಳಗೊಂಡು ವಿವಿಧ ಕಲಾ ತಂಡಗಳು ಭಾಗವಹಿಸಿದ್ದವಲ್ಲದೇ ಅಥಣಿತಾಲೂಕಿನಶೇಡಬಾಳದಜೈನಆಶ್ರಮದ



ಪದ್ಮಾವತಿ ಎಂಬ ಆನೆಯ ಅಂಭಾರಿಯ ಮೇಲೆ ಶ್ರೀ ಖಾಸ್ಗತರ ಬೆಳ್ಳಿ ಮೂರ್ತಿಯ ಮೆರವಣಿಗೆ ಹಾಗೂ ಅಶ್ವಮೇಧ ರಥದಲ್ಲಿ ಶ್ರೀಗಳ ಮೇರವಣಿಗೆ ಐತಿಹಾಸಿಕ ತಾಳಿಕೋಟೆ ಪಟ್ಟಣದ ರಾಜ ವೈಭವವನ್ನು ಮರುಕಳಿಸುಂತೆ ಎದ್ದು ಕಾಣುತ್ತಿತ್ತು. ಮಹಾ ವೈಭವದ ಗಂಗಸ್ಥಳ ಕಾರ್ಯಕ್ರಮದಲ್ಲಿ ನಡೆದ "ಓಂ ನಮಃ ಶಿವಾಯ" ಎಂಬ ಶಿವಭಜನೆಯು ಪುರಾತನ ಕಾಲದ ರಾಜ ವೈಭವವನ್ನು ಮರುತಂದಂತೆ ಭಾಸವಾಗುತ್ತಿತ್ತು. ಮೆರವಣಿಗೆಯಲ್ಲಿ ಅನೇಕ ಜನರು ಮನೆಯ ಹಾಗೂ ಅಂಗಡಿಗಳ ಮೇಲಿಂದ ಶ್ರೀ ಖಾಸ್ಗತರ ಬೆಳ್ಳಿ ಮೂರ್ತಿಗೆ ಹಾಗೂ ವಿರಕ್ತಶ್ರೀಗಳ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು.

ಮೆರವಣಿಗೆಯಲ್ಲಿ ಅನ್ನ ಪ್ರಸಾದ :

ಮೆರವಣಿಗೆಯಲ್ಲಿ ರಾಜವಾಡೆ ಕಿಂಗ್ಸ್ ಗೆಳೆಯರ ಬಳಗ, ಎಬಿಡಿ ಪೌಂಡೇಶನ್ ಗೆಳೆಯರ ಬಳಗ, ಅನುಗ್ರಹಣ್ಣಿನಆಸ್ಪತ್ರೆಯನೇತ್ರತಜ್ಞಡಾ.ಪ್ರಭುಗೌಡ ಲಿಂಗದಳ್ಳಿ ಅಭಿಮಾನಿ ಬಳಗ, ನಮ್ಮ ಗೆಳೆಯರ ಬಳಗ, ಮತ್ತು ಸಜ್ಜನ ಸಮಾಜಬಾಂದವರು, ಭಗತ್‌ಸಿಂಗ್ ಗೆಳೆಯರ ಬಳಗ, ಸಹಹೃದಯ ಗೆಳೆಯರಬಳಗ,ಒಳಗೊಂಡುಅನೇಕಯುವಕ ಸಂಘದವರುದಾರಿಯುದ್ದಕ್ಕೂಮಾದಲಿ,ರೈಸ್ ಬಾತ್, ಶೀರಾ, ಕೇಸರಿಭಾತ, ಕ್ಯಾರೇಟ್ ಹಲ್ವಾ, ಬದಾಮಿ ಹಾಲು, ಚಹಾ ಬಿಸ್ಕೀಟ್ ಅಲ್ಲದೇ ವಿವಿಧ ತರಹದ ಪ್ರಸಾದದ ಸೇವೆಯನ್ನು ಏರ್ಪಡಿಸಿದರೆ ಇನ್ನೂ ಕೆಲವರು ಕುಡಿಯುವ ನೀರಿನ ಪಾಕೇಟ್ ಮತ್ತು ಬಾಟಲ್‌ಗಳನ್ನು ಭಕ್ತಾಧಿಗಳಿಗೆ ನೀಡಿ ದಣಿವನ್ನು ತಣಿಸಿದರು. ಮುಂಜಾನೆ 8 ಘಂಟೆಗೆ ಪ್ರಾರಂಭಗೊಂಡ ಈ ಗಂಗಸ್ಥಳ ಮಹಾ ಮೆರವಣಿಗೆಯು ವಿವಿಧ ಪ್ರಮುಖ ಬಡಾವಣೆಗಳಲ್ಲಿ ಹಾಯ್ದು ಶ್ರೀ ಖಾಸ್ಗತೇಶ್ವರ ಮಠಕ್ಕೆಮದ್ಯಾಹ್ನ 2-30 ಘಂಟೆಗೆ ಆಗಮಿಸಿತು. ಜಾತ್ರೋತ್ಸವ ನಿಮಿತ್ಯ ಚಾಲಕರ ಸಂಘದಿಂದರಕ್ತದಾನಶಿಬಿರವನ್ನುಆಯೋಜಿಸಿ ಎಲ್ಲದಾನಗಳಲ್ಲಿ ರಕ್ತದಾನ ಮಹಾದಾನ ಎಂಬುದನ್ನುಜನರಲ್ಲಿ ಜಾಗೃತಿ ಮೂಡಿಸಿದರು. ಈ ಮಹಾ ಕಾರ್ಯಕ್ರಮದಲ್ಲಿ ಮುಂಬಯಿ, ಪುಣೆ, ಹೈದ್ರಾಬಾದ, ಅಲ್ಲದೇ ಹುಬ್ಬಳ್ಳಿ, ಧಾರವಾಡ,ಬೆಂಗಳೂರ,ಗುಲಬರ್ಗಾ,ಮಹಾ ನಗರಗಳಿಂದಲೂ ಸಾವಿರಾರೂ ಸಂಖ್ಯೆಯಲ್ಲಿ ಭಕ್ತ ಸಮೂಹ ಪಾಲ್ಗೊಂಡು ಭಕ್ತಿಭಾವ ಮೆರೆದರು.

ಈ ಮೆರವಣಿಗೆಯಲ್ಲಿ ಶ್ರೀ ಖಾಸ್ಗತೇಶ್ವರ ಮಠದ ಉಸ್ತುವರಿಯಾದ ಶ್ರೀ ವೇ॥ ಮುರುಘೇಶ ವಿರಕ್ತಮಠ, ವೇ॥ ವಿಶ್ವನಾಥ ವಿರಕ್ತಮಠ, ಮೊದಲಾದವರು ಪಾಲ್ಗೊಂಡಿದ್ದರು.

**ಪೋಲೀಸ್ ಬಂದೋಬಸ್ತ :** ಈ ಬೃಹತ್ ಮೆರವಣಿಗೆಯಲ್ಲಿ ಶಾಂತಿ ಮತ್ತು ಸುವ್ಯವಸ್ಥೆ ಕಾಪಾಡಿಕೊಡು ಬರಲು ಪೋಲೀಸ್ ಹಿರಿಯ ಅಧಿಕಾರಿಗಳ ಮಾರ್ಗದರ್ಶನದಲ್ಲಿ ಪಿಎಸ್‌ಐ ರಾಮನಗೌಡ ಸಂಕನಾಳ, ಆರ್.ಎಸ್.ಭಂಗಿ, ಅವರು ತಮ್ಮ ಸಿಬ್ಬಂದಿಯೊಂದಿಗೆ ಯೋಗ್ಯ ಬಂದೋಬಸ್ತ ಏರ್ಪಡಿಸಿದ್ದರು.

---

### ಕೃಷ್ಣಾ ನದಿಯಲ್ಲಿ ಐದು ಅಡಿಯಷ್ಟು ನೀರು ಹೆಚ್ಚಳ | ಪ್ರವಾಹ ಭೀತಿಯಲ್ಲಿ ತಮದಡ್ಡಿ ಗ್ರಾಮಸ್ಥರು

## ಪುನರ್ ವಸತಿ ಕಲ್ಪಿಸದ ಸರಕಾರದ ವಿರುದ್ಧ ಆಕ್ರೋಶ

**ತೇರದಾಳ :** ಜಿಲ್ಲೆಯ ಜೀವನಾಡಿ ಕೃಷ್ಣಾ ನದಿಯ ತಮದಡ್ಡಿ ಗ್ರಾಮದಲ್ಲಿ ಮಂಗಳವಾರ ಬೆಳಗ್ಗೆ ಐದು ಅಡಿಯಷ್ಟು ನೀರು ಹೆಚ್ಚಳಗೊಂಡಿದ್ದು, ಗ್ರಾಮಸ್ಥರಲ್ಲಿ ಪ್ರವಾಹ ಭೀತಿ ಶುರುವಾಗಿದೆ.

ಇದೇ ರೀತಿ ಎರಡ್ಮೂರು ದಿನ ನೀರು ಹೆಚ್ಚಳಗೊಂಡರೆ ಕ್ರಮೇಣವಾಗಿ ನೀರು ಗ್ರಾಮದೊಳಗೆ ನುಗ್ಗುತ್ತದೆ ಎಂಬುದು ಗ್ರಾಮಸ್ಥರ ಹೇಳಿಕೆ.

ಸರಕಾರದ ವಿರುದ್ಧ ಆಕ್ರೋಶ-ತಮದಡ್ಡಿ ಗ್ರಾಮ ಮುಳಗಡೆ ಗ್ರಾಮ ಎಂದು ಘೋಷನೆಗೊಂಡು ದಶಕ ಕಳೆದರು ಇನ್ನೂ ಸ್ಥಳಾಂತರಗೊಳಿಸದಿರುವುದಕ್ಕೆ ತಮದಡ್ಡಿ ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸಿದ್ದಾರೆ. 2008ರಲ್ಲಿ ತಮದಡ್ಡಿಮುಳಗಡೆಗ್ರಾಮಎಂದು ಸರಕಾರ ಘೋಷನೆ ಮಾಡಿದೆ. 2012ರಲ್ಲಿ ಮನೆಗಳಿಗೆ ಪರಿಹಾರ ವಿತರಿಸಿದೆ. ಆದರೆ ಇನ್ನೂ ಪುನರ್ ವಸತಿ ಕಲ್ಪಿಸಿಲ್ಲ. 2019ರಲ್ಲಿ ಬಂದ ಪ್ರವಾಹದಿಂದಾಗಿ ನಮ್ಮ ಮನೆ ಕುಸಿದು ದುರ್ಘಟನೆ ನಡೆಯಿತು. ಮನೆಗೆ ಪರಿಹಾರ ನೀಡಲಿಲ್ಲ.



ಗಾಯಾಳುಗಳ ಆಸ್ಪತ್ರೆ ವೆಚ್ಚ ನೀಡಲಿಲ್ಲ ಎಂದು ನಂದೆಪ್ಪ ನಂದೆಪ್ಪನವರ ಅಸಮಾಧಾನ ತೋಡಿಕೊಂಡರು. ತಮದಡ್ಡಿ ಗ್ರಾಮದಲ್ಲಿ ಅಂದಾಜು ಐದು ಸಾವಿರ ಜನಸಂಖ್ಯೆ ಇದೆ. ಪ್ರವಾಹ ಬಂದರೆ ಜಾನುವಾರಗಳನ್ನು ಕರೆದುಕೊಂಡು ಎಲ್ಲಿಗೆ ಹೋಗಬೇಕು. ಸಂಬಂಧಿಕರ ಮನೆಗಳಿಗೆಸರಕಾರಪ್ರಾರಂಭಿಸುವ ಕಾಳಜಿ ಕೇಂದ್ರಗಳಿಗೆ ಎಷ್ಟು ಅಂತ ಹೋಗುವುದು. ನಮಗೆ ಶಾಶ್ವತ ಪರಿಹಾರ ಒದಗಿಸಿ ಎಂದು ಆಗ್ರಹಿಸಿದ್ದಾರೆ.

ಬೇರೆ ಜಾಗ ನೀಡಿ-ಸರಕಾರ ತಮದಡ್ಡಿ ಪುನರ್ ವಸತಿಗಾಗಿ ನೀಡಿದ್ದ ಜಾಗ ಕುರಿತು ತಕರಾರುಗೊಂಡ ಪ್ರಕರಣ ನ್ಯಾಯಾಲಯದಲ್ಲಿದೆ. ಆದರೆ ಸರಕಾರ ಅಲ್ಲಿಯೂ ಸರಿಯಾದ ವಾದ ಮಂಡಿಸದ ಕಾರಣ ಪ್ರಕರಣ ಇತ್ಯರ್ಥಗೊಳ್ಳುತ್ತಿಲ್ಲ. ಆದ್ದರಿಂದ ಪ್ರಕರಣ ಇತ್ಯರ್ಥಗೊಳಿಸುವ ಕ್ರಮ ಕೈಗೊಳ್ಳಿ ಇಲ್ಲವೇ ಬೇರೆ ಕಡೆಗೆ ಜಾಗ ನೀಡಿ ನಮಗೆ ಪರಹಾರ ಒದಗಿಸಿ ಎಂದುಗ್ರಾಮಸ್ಥರುಆಗ್ರಹಿಸಿದ್ದಾರೆ. ಮೊದಲು ನೀಡಿದ್ದ ಪರಿಹಾರ ನಮ್ಮ ಜೀವನೋಪಾಯಕ್ಕೆ ಖಾಲಿ ಆಗಿದೆ. ಪರಿಹಾರ ನೀಡಿದ ನಂತರ ಎರಡು ಬಾರಿ ಪ್ರವಾಹ ಬಂದಿದೆ. ಪ್ರತಿಯೊಂದುಕುಟುಂಬಲಕ್ಷಾಂತರ ಹಣ ನಷ್ಟ ಅನುಭವಿಸಿದ್ದಾರೆ. ಕೂಡಲೇ ನಮಗೆ ಬೇರೆ ಪರಿಹಾರ ನೀಡಿ ತಮದಡ್ಡಿ ಗ್ರಾಮವನ್ನು ಪುನರ್ ವಸತಿ ಕಲ್ಪಿಸುವ ಕೆಲಸ ಮಾಡಬೇಕೆಂದು ನಂದೆಪ್ಪ ನಂದೆಪ್ಪನವರ, ಜಗದೀಶ ಝೂರೆ, ಮಹಾವೀರ ಬಿಲವಡಿ, ಗಂಗಪ್ಪ ಶಿರಗಾರ,ಸುರೇಶಅಕ್ಕಿವಾಟಕಲ್ಲಪ್ಪ ಶಿರಹಟ್ಟಿ, ಸುಕುಮಾರ ಪಾಟೀಲ ಸರಕಾರವನ್ನು ಆಗ್ರಹಿಸಿದ್ದಾರೆ.

ಸೋಮವಾರ ಉಪವಿಭಾಗಾಧಿಕಾರಿ ಶ್ವೇತಾ ಬೀಡಕರ್ ನೇತೃತ್ವದ ತಂಡ ತಮದಡ್ಡಿಗೆ ಬೇಟಿ ನೀಡಿ ಪರಿಶೀಲಿಸಿ, ಕೃಷ್ಣಾ ನದಿಗೆ ಅಪಾರ ಪ್ರಮಾಣದ ನೀರು ಹರಿದು ಬರುತ್ತಿದೆ. ನದಿ ತೀರಕ್ಕೆ ಯಾರು ಹೋಗಬೇಡಿ ಎಂದು ಗ್ರಾಮಸ್ಥರಿಗೆ ಮನವಿ ಮಾಡಿದ್ದಾರೆ.

---

## ಕಾರ್ಗೀಲ್ ಯೋಧರ ತ್ಯಾಗ-ಬಲಿದಾನ ಅವಿಸ್ಮರಣೀಯ: ನಂದು ಗಾಯಕವಾಡ

**ಮಹಾಲಿಂಗಪುರ :** ಕಾರ್ಗೀಲ್ ಯುದ್ಧದಲ್ಲಿ ದೇಶಕ್ಕಾಗಿ ನಮ್ಮ ಸೈನಿಕರು ಮಾಡಿದ ತ್ಯಾಗ-ಬಲಿದಾನ ಎಂದಿಗೂ ಮರೆಯಲು ಸಾಧ್ಯವಿಲ್ಲ ಎಂದು ಬನಹಟ್ಟಿಯ ಸಾಮಾಜಿಕಕಾರ್ಯಕರ್ತ,ಪ್ರಖರ ವಾಗ್ಮಿ ನಂದು ಗಾಯಕವಾಡ ಹೇಳಿದರು.

ಕಾರ್ಗೀಲ್ ವಿಜಯೋತ್ಸವದ 25ನೇ ವಾರ್ಷಿಕೋತ್ಸವದ ನಿಮಿತ್ಯ ಪಟ್ಟಣದ ಸರ್ಕಾರಿ ಪಿಯು ಕಾಲೇಜು ಮತ್ತು ಸರ್ಕಾರಿ ಪ್ರೌಢಶಾಲೆ ಹಾಗೂ ಕೆಎಲ್‌ಇ ಸಂಸ್ಥೆಯ ಎಸ್‌ಸಿಪಿ ಪದವಿ ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗಾಗಿ ಹಮ್ಮಿಕೊಂಡಿದ್ದ ಕಾರ್ಗೀಲ್ ಕದನ ಮತ್ತು ಕಥನ ಸರಣಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಮಾತನಾಡಿದ ಅವರು ಕಾರ್ಗೀಲ್ ಯುದ್ದದಲ್ಲಿ ದೇಶಕ್ಕಾಗಿ ಪ್ರಾಣಬಿಟ್ಟ ಯೋಧರ ಒಂದೊಂದು ಕಥೆಗಳನ್ನು ಕೇಳಿದರೆ ರಕ್ತ ಕುದಿಯುತ್ತದೆ. ಕಾರ್ಗೀಲ್ ಯುದ್ದದಲ್ಲಿ ಒಟ್ಟು 527 ಸೈನಿಕರು ಪ್ರಾಣ ಕಳೆದುಕೊಂಡರೆ, 1363 ಸೈನಿಕರು ತಮ್ಮ ಅಂಗಾಂಗಗಳನ್ನು ಕಳೆದುಕೊಂಡು ದೇಶವನ್ನು ರಕ್ಷಿಸಿದ್ದಾರೆ ಎಂದರು.



ಕಾರ್ಗೀಲ್ ಯುದ್ದದ ವಿಜಯೋತ್ಸವದ ಹಿನ್ನಲೆಯಲ್ಲಿ ನಮ್ಮ ಸಮಾಜದಲ್ಲಿನ ತರುಣ, ತರುಣಿಯರು ಇಂತಹ ನೈಜ್ ಹೀರೋಗಳ ಸಾಹಸ ಕಥೆಗಳನ್ನು ಕೇಳಿನಾವುದೇಶಕ್ಕಾಗಿಧರ್ಮಕ್ಕಾಗಿ, ಕುಟುಂಬಕ್ಕಾಗಿ ಏನನ್ನಾದರೂ ಮಾಡಲು ಸಿದ್ದರಾಗಬೇಕು. ಮೂರು ಗಂಟೆಯ ಸಿನಿಮಾ ಹೀರೋಗಳ ಅಭಿಮಾನಿಗಳಾಗದೆ ಹೆತ್ತು, ಸಾಕಿ ಸಲುಹಿ, ವಿದ್ಯೆ ಕೊಡುಸುತ್ತಿರುವ ನಮ್ಮ ನಿಜವಾದ ಹೀರೋಗಳು ಎಂದು ತಿಳಿದವರು ಮಾತ್ರ ಜೀವನದಲ್ಲಿ ಏನಾದರೂ ಸಾಧನೆಮಾಡಲುಸಾಧ್ಯಎಂದರು. ಸ್ವಾತಂತ್ರ್ಯದನಂತರಇಲ್ಲಿಯವರೆಗೆ 80 ಸಾವಿರಕ್ಕೂ ಅಧಿಕ ಸೈನಿಕರು ದೇಶಕ್ಕಾಗಿ ತಮ್ಮ ಪ್ರಾಣವನ್ನು ತ್ಯಾಗ ಮಾಡಿದ್ದಾರೆ. ಆದರೆ ಇಂದಿನ ಹೇಡಿ ಯುವಕ-ಯುವತಿಯರು ಸಣ್ಣಪುಟ್ಟ ಸಮಸ್ಯೆಗಳಿಗಾಗಿ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಯುವಶಕ್ತಿಯು ಮೋಬೈಲ, ಸಾಮಾಜಿಕ ಜಾಲತಾಣಗಳಿಂದ ದೂರವಿದ್ದು ನಮ್ಮ ದೇಶಕ್ಕೆ ಸೈನಿಕರ ಕೊಡುಗೆ, ತ್ಯಾಗ, ಬಲಿದಾನಗಳ ಕಥೆಗಳನ್ನುಓದಿತಿಳಿದುಕೊಳ್ಳಬೇಕು. ಇದೇ ಜುಲೈ 26ರಂದು ಕಾರ್ಗೀಲ್ ವಿಜಯೋತ್ಸವದ 25ನೇ ವಾರ್ಷಿಕೋತ್ಸವದಂದು ಪ್ರತಿಯೊಬ್ಬರು ತಮ್ಮ ಮನೆಯ ಸದಸ್ಯರೊಂದಿಗೆ ಕಾರ್ಗೀಲ್ ಯೋಧರ ಸ್ಮರಣೆಗಾಗಿ ಮನೆಮನೆಗಳಲ್ಲಿ ನಂದಾದೀಪ ಬೆಳಗಿಸೋಣನಮ್ಮದೇಶಕಾಯುವ ಸೈನಿಕರಿಗೆ ಶಕ್ತಿ ತುಂಬಲು, ಅನ್ನ ನೀಡುವ ರೈತ, ಮಾನ ಮುಚ್ಚುವ ಬಟ್ಟೆನೇಯುವ ನೇಕಾರ, ಶಿಕ್ಷಣ ಕೊಡುವಗುರುಗಳು,ನಮ್ಮಜೀವನ ರೂಪಿಸಿದ ತಂದೆತಾಯಿಗಳಿಗೆ ಒಳಿತಾಗಲು ತಾಯಿ ಭಾರತ ಮಾತೆಯಲ್ಲಿ ಪ್ರಾರ್ಥಿಸೋಣ ಎಂದರು. ಸರ್ಕಾರಿ ಪಿಯು ಕಾಲೇಜಿನ ಪ್ರಾಚಾರ್ಯ ಎಸ್. ಆರ್.ನಾಯಕೋಡಿ, ಕೆಎಲ್‌ಇ ಕಾಲೇಜಿನ ಪ್ರಾಚಾರ್ಯ ಡಾ.ಕೆ. ಎಂ.ಅವರಾದಿ, ಪುರಸಭೆ ಮಾಜಿ ಅಧ್ಯಕ್ಷ ಜಿ.ಎಸ್.ಗೊಂಬಿ, ಸಿ.ಎಸ್. ಮಠಪತಿ, ಸಿಬಿಸಿ ಕಮಿಟಿಯ ಉಪಾಧ್ಯಕ್ಷ ಶಿವಾನಂದ ಹುಣಶ್ಯಾಳ, ಸದಸ್ಯ ನಂದು ಲಾತೂರ, ನಿವೃತ್ತ ಉಪನ್ಯಾಸಕ ಎಸ್.ಸಿ.ಬೊಮ್ಮನ್ನವರ, ಪತ್ರಕರ್ತ ಚಂದ್ರಶೇಖರ ಮೋರೆ, ಉಪನ್ಯಾಸಕರಾದವಿಷ್ಣುಬಡಿಗೇರ, ಸದಾಶಿವ ಮೇತ್ರಿ, ಟಿ.ಡಿ.ಡಂಗಿ, ಎ.ಎಂ.ಉಗಾರೆ, ವ್ಹಿ.ಎ.ಅಡಹಳ್ಳಿ, ಸರ್ಕಾರಿ ಪ್ರೌಢಶಾಲೆಯ ಮುಖ್ಯೋಪಾಧ್ಯಯ ಧನಂಜಯ ಕುಲಕರ್ಣಿ, ಎಸ್‌ಡಿಎಂಸಿ ಅಧ್ಯಕ್ಷ ಸಂಜಯ ರಾಠೋಡ, ಶಿಕ್ಷಕರಾದ ಸದಾಶಿವಕಂಬಾರ,ಭಾರತಿಜಿರಲಿ, ಎಲ್.ಬಿ.ಬೇಟಗೇರಿ, ರಾಜೇಶ್ವರಿ ಜಾಲಿಗಿಡದ, ಎಂ.ಜಿ.ಅಲ್ಲಾಖಾನ, ಪಿ.ಆಯ್.ಬಡಿಗೇರ ಸೇರಿದಂತೆ ಹಲವರು ಇದ್ದರು.

---

### ಆಸ್ಪತ್ರೆಯ ವಿಷಯದಲ್ಲಿ ರಾಜಕಾರಣ ಬೇಡ: ಸರ್ಕಾರಿ ನೌಕರಿ ಬಿಟ್ಟು ರಾಜಕೀಯಕ್ಕೆ ಬನ್ನಿ: ಶಾಸಕ ಸವದಿ

## ಮಹಾಲಿಂಗಪುರ ಸರ್ಕಾರಿ ಆಸ್ಪತ್ರೆ ಅವ್ಯವಸ್ಥೆ ಬಗ್ಗೆ ಶಾಸಕರು ಕೆಂಡಾಮಂಡಲ

**ರಬಕವಿ-ಬನಹಟ್ಟಿ :** ಒಣ ರಾಜಕೀಯ ಮಾಡುವುದನ್ನು ಬಿಟ್ಟು ಸರ್ಕಾರಿ ಆಸ್ಪತ್ರೆಗಳ ವೈದ್ಯರು ರೋಗಿಗಳ ಸೇವೆ ಮಾಡಬೇಕು. 32 ಜನ ಸಿಬ್ಬಂದಿ ಹೊಂದಿರುವ ಮಹಾಲಿಂಗಪುರ ಸರ್ಕಾರಿ ಆಸ್ಪತ್ರೆಯಲ್ಲಿ ಮಾಸಿಕ ಒಳರೋಗಿಗಳ ಸಂಖ್ಯೆ ಮತ್ತು ಹೆರಿಗೆಯಾದ ಮಹಿಳೆಯರ ಸಂಖ್ಯೆಗಳ ಬಗ್ಗೆ ಮುಧೋಳ ತಾಲೂಕಾ ವೈದ್ಯಾಧಿಕಾರಿ ಡಾ. ಮಲಘಾಣ ನೀಡಿದ ವಿವರಣೆಗೆ ಕೆಂಡಾಮಂಡಲವಾದ ಶಾಸಕ ಸಿದ್ದು ಸವದಿ, ರಬಕವಿ-ಬನಹಟ್ಟಿ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಸಿಬ್ಬಂದಿ ಕೊರತೆ ನಡುವೆಯೂದಾಖಲೆಯರೋಗಿಗಳಚಿಕಿತ್ಸೆ ನೀಡಲಾಗುತ್ತಿದೆ. ಆದರೆ ಮಹಾಲಿಂಗಪುರ ಸರ್ಕಾರಿ ಆಸ್ಪತ್ರೆ ರೋಗಿಗಳಿಲ್ಲದೇ ಭಣಗುಡುತ್ತಿದೆ. ರಾಜಕೀಯ ಮಾಡುವ ತೆವಲಿದ್ದರೆ ಸರ್ಕಾರಿ ನೌಕರಿ ತ್ಯಜಿಸಿ ನೇರವಾಗಿ ರಾಜಕೀಯಕ್ಕಿಳಿಯಿರಿ ಅದು ಬಿಟ್ಟು ಪವಿತ್ರವಾದ ಚಿಕಿತ್ಸಾ ಕೆಲಸಕ್ಕೆ ದ್ರೋಹ ಬಗೆಯದೇ ನಿಷ್ಠರಾಗಬೇಕೆಂದು ಶಾಸಕ ಸವದಿ ಸರ್ಕಾರಿ ನೌಕರರಿಗೆ ನೇರವಾಗಿ ಹೇಳಿದರು.

ಶನಿವಾರದಂದು ರಬಕವಿ-ಬನಹಟ್ಟಿ ನಗರಸಭೆ ಸಭಾಭವನದಲ್ಲಿ ಜರುಗಿದ ತಾಲೂಕು ಮಟ್ಟದ ಕೆಡಿಪಿ ಸಭೆಯಲ್ಲಿ ಇಲಾಖಾವಾರು ಪ್ರಗತಿ ಪರಿಶೀಲನೆ ನಡೆಸಿ ಮಾತನಾಡಿದ ಅವರು, ಸಿಬ್ಬಂದಿ ಕೊರತೆಯಿಂದ ಬಹುತೇಕ ಸರ್ಕಾರಿ ಆಸ್ಪತ್ರೆಗಳು ನಲುಗುತ್ತಿವೆ. ಇಲ್ಲಿನ 32 ಜನ ಸಿಬ್ಬಂದಿಗೆ ಯಾವ ಪುರುಷಾರ್ಥಕ್ಕೆ ಸರ್ಕಾರ ಸಂಬಳ ನೀಡಿ ಆಸ್ಪತ್ರೆ ಮುಂದುವರೆಸಬೇಕೆಂದು ಪ್ರಶ್ನಿಸಿದ ಅವರು, ರೋಗಿಗಳೇ ಬಾರದ ಆಸ್ಪತ್ರೆಯನ್ನು ಆರು ತಿಂಗಳ ಕಾಲ ಮುಚ್ಚುವಂತೆ ಮತ್ತು ಬೇಜವಾಬ್ದಾರಿಯಿಂದ ಸೇವೆ ಸಲ್ಲಿಸುತ್ತಿರುವ ವೈದ್ಯಾಧಿಕಾರಿ ಮೇಲೆ ಕ್ರಮ ಜರುಗಿಸಲು ಜಿಲ್ಲಾ ವೈದ್ಯಾಧಿಕಾರಿಗಳಿಗೆ ಸೂಚಿಸುವಂತೆ ನಿರ್ದೇಶನ ನೀಡಿದರು. ತಾಲೂಕು ವೈದ್ಯಾಧಿಕಾರಿ ಡಾ. ಜಿ. ಎಸ್. ಗಲಗಲಿ, ರಬಕವಿ-ಬನಹಟ್ಟಿ ಸರ್ಕಾರಿ ಸಮುದಾಯ ಆರೋಗ್ಯ ಕೇಂದ್ರದಲ್ಲಿ ತ್ರೈಮಾಸಿಕ ಅವಧಿಯಲ್ಲಿ 26 ವಾಂತಿಬೇಧಿ, 354 ಕಣ್ಣಿನ ಶಸ್ತ್ರಕ್ರಿಯೆ, ಕನ್ನಡಕಗಳ ವಿತರಣೆ, ಶಾಲಾ ಮಕ್ಕಳ ಆರೋಗ್ಯ ತಪಾಸಣೆ, ಅಂಗನವಾಡಿಯ 623 ಮಕ್ಕಳಿಗೆ 4 ಡಿ ಚಿಕಿತ್ಸೆ ಪೂರ್ಣವಾಗಿ ನೀಡಲಾಗಿದೆ. 385 ಜನರ ಎಚ್‌ಐವಿ ಪರೀಕ್ಷೆ ನಡೆಸಿದ್ದು, 14 ಜನರದ್ದು ಪಾಸಿಟಿವ್ ಬಂದಿದ್ದು, 417



ಗರ್ಭಿಣಿಯರಲ್ಲಿ ನಾಲ್ವರದ್ದು ಪಾಸಿಟಿವ್ ಬಂದಿವೆ.ತಾಲೂಕುಪ್ರದೇಶದಲ್ಲಿ14ಡೆಂಗ್ಯೂ ಪ್ರಕರಣಗಳು ಪತ್ತೆಯಾಗಿದ್ದು, ಸಮರ್ಪಕ ಚಿಕಿತ್ಸೆಯಿಂದ ಗುಣಮುಖರಾಗಿದ್ದಾರೆ. ಕಳೆದೆರಡು ತಿಂಗಳಿಂದ ಲಾರ್ವಾ ಸರ್ವೇ ನಡೆಸಲಾಗುತ್ತಿದ್ದು, ಸದ್ಯ ಯಾವುದೇ ಡೆಂಗ್ಯು ಪ್ರಕರಣಪತ್ತೆಯಾಗಿಲ್ಲವೆಂದುವಿವರಿಸಿದರು. ಸರ್ಕಾರಿ ಸಮುದಾಯ ಆರೋಗ್ಯ ಕೇಂದ್ರವನ್ನು ಮೇಲ್ದರ್ಜೆಗೇರಿಸಬೇಕಾದರೆ ನಮಗೆ ಹತ್ತು ಎಕರೆ ಪ್ರದೇಶವನ್ನು ಗುರುತಿಸಿ ನೀಡುವಂತೆ ಕೋರಿದರು. ಇದಕ್ಕೆ ಸ್ಪಂದಿಸಿದ ಶಾಸಕರು, ಬನಹಟ್ಟಿಯ ಸಣ್ಣ ಕೈಗಾರಿಕೆ ಪ್ರದೇಶದಲ್ಲಿದ್ದ ಕಾಲೇಜು ಕಟ್ಟಡದ ಜಾಗೆ ಇಲ್ಲವೇ ಮದನಮಟ್ಟಿ ಬಳಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಬಳಿ ಜಾಗೆ ನೀಡಲು ಪ್ರಸ್ತಾವನೆ ಸಲ್ಲಿಸಲು ಸೂಚಿಸಿದರು.

ಶಾಲಾ ಶಿಕ್ಷಣ ಇಲಾಖೆಯ ಬಿಇಓ ಅಶೋಕ ಬಸನ್ನವರ 1 ರಿಂದ 10 ನೇ ತರಗತಿವರೆಗೆ 9723 ಮಕ್ಕಳ ದಾಖಲಾತಿಯಾಗಿದೆ. ಆನ್ಲೈನ್ನಲ್ಲಿ ಇನ್ನೂ ಮಕ್ಕಳ ದಾಖಲಾತಿ ನಮೂದಿಸಲಾಗುತ್ತಿದ್ದು, ಸಂಖ್ಯೆ ಹೆಚ್ಚಳವಾಗಲಿದೆ. ಕಲಿಕೆಯಲ್ಲಿ ಹಿಂದುಳಿದ ಮಕ್ಕಳನ್ನು ಇಲಾಖೆಯ ಅಧಿಕಾರಿಗಳಿಗೆ ದತ್ತು ನೀಡಲಾಗಿದೆ. ಅಲ್ಲದೇ ನಾವಲಗಿ ಮತ್ತು ಮದನಮಟ್ಟಿ ಸರ್ಕಾರಿ ಶಾಲೆಗಳ ಗುಣಮಟ್ಟ ಮತ್ತು ಬೋಧನಾ ವಿಧಾನ ಅಳವಡಿಕೆಗೆ ಸರ್ಕಾರಿ ಶಾಲೆಯ ಶಿಕ್ಷಕರನ್ನು ಕಳಿಸಲಾಗುತ್ತಿದೆ. 5,23,936 ಮಕ್ಕಳಿಗೆ ಪಠ್ಯಪುಸ್ತಕ ವಿತರಣೆಯಾಗಿದ್ದು, ಉರ್ದು ಶಾಲೆಯ ಮಕ್ಕಳ ಪಠ್ಯಪುಸ್ತಕಗಳು ಬೇರೆ ರಾಜ್ಯದಲ್ಲಿ ಮುದ್ರಣಗೊಂಡು ಬರಬೇಕಾಗಿದ್ದರಿಂದ ಪೂರೈಕೆಯಲ್ಲಿ ವಿಳಂಬವಾಗಿದೆ. ಎಲ್ಲ ಮಕ್ಕಳಿಗೆ ಸಮವಸ್ತ್ರಗಳನ್ನು ಮತ್ತು ಶೂಗಳನ್ನು ವಿತರಿಸಲಾಗಿದೆ. 31 ವಿವೇಕ ಕೊಠಡಿಗಳಲ್ಲಿ 28 ಪೂರ್ಣಗೊಂಡಿದ್ದು, ಉಳಿದ ಕೊಠಡಿಗಳು ಸದ್ಯದಲ್ಲಿ ಸಿದ್ಧಗೊಳ್ಳಲಿವೆ. 3,525 ಶಿಕ್ಷಕರು ಕರ್ತವ್ಯದಲ್ಲಿದ್ದು, ಕೊರತೆ ಇರುವ ಶಾಲೆಗಳಿಗೆ 286 ಅತಿಥಿ ಶಿಕ್ಷಕರನ್ನು ನೇಮಿಸಲಾಗಿದೆ.

ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಜಿಲ್ಲೆಗೆ ಶೇ. 83.97 ಫಲಿತಾಂಶ ಪಡೆಯುವ ಮೂಲಕ ನಮ್ಮ ತಾಲೂಕು ಪ್ರಥಮ ಸ್ಥಾನದಲ್ಲಿದ್ದು, ಫಲಿತಾಂಶ ಸುಧಾರಣೆಗೆ ಪರಿಹಾರ ಬೋಧನೆ ನಡೆಸಲಾಗುತ್ತಿದೆ. ಸರ್ಕಾರಿ ಶಾಲೆಗಳಲ್ಲಿ 6,718 ಮಕ್ಕಳು ವ್ಯಾಸಂಗ ಮಾಡುತ್ತಿದ್ದಾರೆಂದು ವಿವರಿಸಿದರು. ಕುಡುಕ ಶಿಕ್ಷಕರ ಬಗ್ಗೆ ಮತ್ತು ವೃಥಾ ಕಾಲಹರಣ ಮಾಡುತ್ತ ಕಾಲ ಕಳೆಯುವ ಶಿಕ್ಷಕರ ವಿರುದ್ಧ ಯಾವುದೇ ಮುಲಾಜಿಲ್ಲದೇ ಕ್ರಮ ಜರುಗಿಸಲು ಶಾಸಕ ಸವದಿ ಸೂಚಿಸಿದರು.

ಜಿಲ್ಲಾ ಪಂಚಾಯತ್ ಸಹಾಯಕ ಕಾರ್ಯಪಾಲಕ ಅಭಿಯಂತರ ನಾಯಕ್ ಮಾತನಾಡಿ ವಿವೇಕ ಶಾಲೆಗಳ ಪೈಕಿ 18 ಪೂರ್ಣಗೊಂಡಿದ್ದು, ಒಂದು ಬಾಕಿಯಿದೆ. ರಾಷ್ಟ್ರೀಯ ಮಾಧ್ಯಮಿಕ ವಿಭಾಗದ ಒಂದು ಕಾಮಗಾರಿ ಲೋಕಾರ್ಪಣೆಗೆ ಸಿದ್ದವಿದೆ. ಗ್ರಾಮೀಣ ರಸ್ತೆಗಳಲ್ಲಿ 51 ರಸ್ತೆಗಳ ಕಾಮಗಾರಿ ಪೂರ್ಣಗೊಂಡಿದ್ದು, ನಾವಲಗಿ-ಶಿರೋಳ ಮತ್ತು ಹನಗಂಡಿ ರಸ್ತೆಗಳ ಡಾಂಬರೀಕರಣ ಬಾಕಿಯಿದೆ. ರೂ. 18 ಕೋಟಿ ಮೊತ್ತದ ಕ್ರಿಯಾ ಯೋಜನೆಗೆ ರೂ.10 ಲಕ್ಷ ಮಂಜೂರಾಗಿದ್ದು, ಅಷ್ಟರಲ್ಲಿ ಸಾಧ್ಯವಿದ್ದ ರಸ್ತೆ ಕಾಮಗಾರಿ ನಡೆಸಲು ಉದ್ದೇಶಿಸಿದೆ. ಆಸಂಗಿ ಸ್ಮಶಾನ ರಸ್ತೆ ಕಾಮಗಾರಿಗೆ ಶೀಘ್ರ ಚಾಲನೆ ನೀಡಲಾಗುತ್ತದೆ. ಜಲಧಾರೆ ಯೋಜನೆಯಡಿ ಶೇ.80 ರಷ್ಟು ಕಾಮಗಾರಿ ಪೂರ್ಣಗೊಂಡಿವೆಯೆಂದು ವಿವರಿಸಿದರು. ಹನಗಂಡಿ ಗ್ರಾಮದ ಎಸ್.ಸಿ. ಮತ್ತು ಗುಡ್ಡದ ಪ್ರದೇಶಕ್ಕೆ ಕುಡಿಯುವ ನೀರು ಪೂರೈಸಲು ಹೊಸ ಕೊಳವೆ ಭಾವಿ ಕೊರೆಸಿ ಶುದ್ಧನೀರು ಪೂರೈಸುವಂತೆ ಶಾಸಕರು ಸೂಚನೆ ನೀಡಿದರು. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಪಶು ಸಂಗೋಪನಾ ಇಲಾಖೆಗೆ ಸಂಬಂಧಿತ ಬೇಡಿಕೆಗಳನ್ನು ಮತ್ತು ಆಗಿರುವ ಕಾಮಗಾರಿಗಳನ್ನು ಪರಿಶೀಲಿಸಲಾಯಿತು.

ವೇದಿಕೆಯಲ್ಲಿ ತಾಲೂಕು ಪಂಚಾಯತಿ ಆಡಳಿತಾಧಿಕಾರಿ ಎಚ್. ಬಿ. ಪಾಟೀಲ, ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಸಿದ್ದಪ್ಪ ಪಟ್ಟಿಹಾಳ, ಉಪ ತಹಶೀಲ್ದಾರ ಶಾಂತಾ ಕೂಗಾಟೆ, ಪೌರಾಯುಕ್ತ ಜಗದೀಶ ಈಟಿ ಉಪಸ್ಥಿತರಿದ್ದರು.

ಲೋಕೋಪಯೋಗಿ, ಜಮಖಂಡಿ, ಮುಧೋಳ, ಸಣ್ಣ ನೀರಾವರಿ, ಜಿಎಲ್ಬಿಸಿ, ಕೃಷಿ, ಭೂಮಾಪನ, ಸಿಟಿಸರ್ವೇ, ಬಿಆರ್ಸಿ, ಹೆಸ್ಕಾಂ,ಭೂ ಸೇನಾ ನಿಗಮ,ತೋಟಗಾರಿಕೆ, ಪಶುಪಾಲನಾ, ಮೀನುಗಾರಿಕೆ, ರೇಷ್ಮೇ, ವಲಯ, ಅರಣ್ಯಾಧಿಕಾರಿಗಳು, ಸಮಾಜ ಕಲ್ಯಾಣ ಇಲಾಖೆ, ಸಹಕಾರ, ಬಿಸಿಎಂ, ಸಾರಿಗೆ, ನಿರ್ಮಿತಿ ಕೇಂದ್ರ, ಆಹಾರ, ಅಬಕಾರಿ, ಆಯುಷ್ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಪ್ರಗತಿ ಪರಿಶೀಲನಾ ಕಾರ್ಯದಲ್ಲಿ ಪಾಲ್ಗೊಂಡಿದ್ದರು.

---

## ಕೈಮಗ್ಗ ನೇಕಾರರ ಏಳ್ಗೆಗಾಗಿ ಶ್ರಮಿಸಿದ್ದ ಬಾಂಗಿ



**ರಬಕವಿ-ಬನಹಟ್ಟಿ:** ದಿವಂಗತ ಪಿ. ಎಂ. ಬಾಂಗಿಯವರು ನೇಕಾರರ ಜೀವಾಳವಾಗಿದ್ದರು. ಕೈಮಗ್ಗ ನೇಕಾರರ ಅಭಿವೃದ್ಧಿಗಾಗಿ ತಮ್ಮ ಜೀವನವನ್ನೇ ಮುಡಿಪಾಗಿಟ್ಟಿದ್ದರು ಎಂದು ಶಾಸಕ ಸಿದ್ದು ಸವದಿ ತಿಳಿಸಿದರು.

ಭಾನುವಾರ ಜಮಖಂಡಿಯ ಶಾಸಕರಾಗಿದ್ದ ದಿವಂಗತ ಪಿ. ಎಂ. ಬಾಂಗಿಯವರ 41 ನೇ ಪುಣ್ಯ ಸ್ಮರಣೋತ್ಸವದ ಅಂಗವಾಗಿ ಕೆ. ಎಚ್. ಡಿ. ಸಿ. ಕಾಲೊನಿಯಲ್ಲಿಯ ಅವರ ಪುತ್ಥಳಿಗೆ ಪೂಜೆ ಸಲ್ಲಿಸಿ ಮಾತನಾಡಿದರು.

ಕೆ. ಎಚ್. ಡಿ. ಸಿ. ನಿಗಮವನ್ನು ಉಳಿಸುವ ದಿಶೆಯಲ್ಲಿ ಸರ್ಕಾರದ ಗಮನವನ್ನು ಸೆಳೆಯುತ್ತೇನೆ. ಈ ಕುರಿತು ಅಧಿವೇಶನದಲ್ಲಿ ಚರ್ಚೆ ಮಾಡಲಾಗುವುದು. ದಿವಂಗತ ಬಾಂಗಿಯವರು ಸಾಮಾಜಿಕ ಕಳಕಳಿಯ ಶಾಸಕರಾಗಿದ್ದುಕೊಂಡು ಜಮಖಂಡಿ ಮತಕ್ಷೇತ್ರದ ಅಭಿವೃದ್ಧಿಗಾಗಿ ಸಾಕಷ್ಟು ಶ್ರಮಿಸಿದ್ದರು ಎಂದು ಶಾಸಕ ಸಿದ್ದು ಸವದಿ ತಿಳಿಸಿದರು.

ಆಕಾಶವಾಣಿ ಧಾರವಾಡ ಕೇಂದ್ರದ ನಿವೃತ್ತ ಅಧಿಕಾರಿ ಚಾಮರಾಜ ಬಾಂಗಿ ಮಾತನಾಡಿ, ಪಿ. ಎಂ. ಬಾಂಗಿಯವರು ಕೈಮಗ್ಗ ವೃತ್ತಿಯನ್ನು ಬೆಳೆಸುವ ನಿಟ್ಟಿನಲ್ಲಿ ರಾಜ್ಯದಲ್ಲಿ ಕೆ. ಎಚ್. ಡಿ. ಸಿ. ನಿಗಮವನ್ನು ಸ್ಥಾಪಿಸಿದರು. ಅವರ ಪ್ರಯತ್ನದಿಂದಾಗಿ ಇಲ್ಲಿಯವರೆಗೂರಾಜ್ಯದಲ್ಲಿಕೈಮಗ್ಗ ನೇಕಾರರು ಉಳಿದುಕೊಂಡು ಬಂದಿದ್ದಾರೆ. ಬಾಂಗಿಯವರು 1970 ರ ದಶಕದಲ್ಲಿ ಉಂಟಾದ ಬರಗಾಲದ ಸಂದರ್ಭದಲ್ಲಿ ಇಲ್ಲಿಯ ಜನರಿಗೆ ಮತ್ತು ಜಾನುವಾರುಗಳಿಗೆ ಕುಡಿಯುವ ನೀರು ಹಾಗೂ ಬೆಳೆಗಳಿಗೆ ನೀರಿನ ಅನುಕೂಲವಾಗುವ ನಿಟ್ಟಿನಲ್ಲಿ ಬನಹಟ್ಟಿ ಹತ್ತಿರದಲ್ಲಿ ಬೃಹತ್ ಕೆರೆ ನಿರ್ಮಾಣ ಮಾಡಿದ್ದು ಬಾಂಗಿಯವರು. ಅವರು ಜಾರಿಗೆ ತಂದ ಯೋಜನೆಗಳು ಇಂದಿಗೂ ಉಳಿದುಕೊಂಡು ಬಂದಿವೆ ಎಂದರು.

ಬಿ. ಎಂ. ಪಾಟೀಲ, ಕರ್ನಾಟಕ ರಾಜ್ಯ ನೇಕಾರ ಸೇವಾ ಸಂಘದ ಅಧ್ಯಕ್ಷ ಶಿವಲಿಂಗ ಟಿರಕಿ, ಆನಂದ ಬಾಡಗಂಡಿ, ಮಹಾದೇವ ಹುನ್ನೂರ, ಶಂಕರ ಕುರಂದವಾಡ, ಈರಣ್ಣ ಚಿಂಚಖಂಡಿ, ಸಂಜಯ ಜೀರಗಾಳ ಸೇರಿದಂತೆ ಕೆ.ಎಚ್. ಡಿ. ಸಿ. ಯ ಅನೇಕ ನೇಕಾರ ಬಾಂಧವರು ಪಾಲ್ಗೊಂಡಿದ್ದರು.

---

## ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ: ಅರ್ಜಿ ಆಹ್ವಾನ

**ಕೊಪ್ಪಳ :** 2024-25 ನೇ ಸಾಲಿನಲ್ಲಿ IIT, IIIT, NIT, IIM IISER, AIIMS, NLU, INI & IUSLA ಮುಂತಾದ ಪ್ರತಿಷ್ಠಿತ ಸಂಸ್ಥೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಕರ್ನಾಟಕ ರಾಜ್ಯದ ಅರ್ಹ ಅಭ್ಯರ್ಥಿಗಳಿಂದ ಪ್ರೋತ್ಸಾಹಧನಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅರ್ಜಿಗಳನ್ನು ಸೇವಾಸಿಂಧು ಪೋರ್ಟಲ್(ಆನ್‌ಲೈನ್) www.https://sevasindhu.karnataka.gov.in/Sevasindhu/DepartmentServices ಮೂಲಕ ಆಗಸ್ಟ್ 3 ರೊಳಗೆ ಸಲ್ಲಿಸಬೇಕು.

ಅರ್ಜಿ ಸಲ್ಲಿಸುವ ಅಭ್ಯರ್ಥಿಯು ಕರ್ನಾಟಕ ರಾಜ್ಯದ ನಿವಾಸಿಯಾಗಿರಬೇಕು. ಅಲ್ಪಸಂಖ್ಯಾತರ ಸಮುದಾಯಕ್ಕೆ ಸೇರಿದವರಾಗಿರಬೇಕು (ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಪಾರ್ಸಿ, ಬೌದ್ಧರು ಮತ್ತು ಸಿಖ್), ಪೂರ್ಣಾವಧಿ ಕೋರ್ಸಗೆ ದಾಖಲಾಗಿರಬೇಕು. ವಿದ್ಯಾರ್ಥಿ ಅಥವಾ ಪೋಷಕರ ವಾರ್ಷಿಕ ಆದಾಯ ಎಲ್ಲಾ ಮೂಲಗಳಿಂದ ರೂ. 8.00 ಲಕ್ಷ ಮೀರಬಾರದು. ಹಿಂದಿನ ವರ್ಷದ ಪರೀಕ್ಷೆಯಲ್ಲಿ ಅನುತ್ತೀರ್ಣರಾದ(ಬ್ಯಾಕ್ ಲಾಗ್) ಅಭ್ಯರ್ಥಿಗಳಿಗೆ ಈ ಪ್ರೋತ್ಸಾಹಧನ ಪಡೆಯಲು ಅವಕಾಶವಿರುವುದಿಲ್ಲ. ಅಭ್ಯರ್ಥಿಯ ವಯಸ್ಸು 35 ವರ್ಷಕ್ಕಿಂತ ಕಡಿಮೆ ಇರಬೇಕು. ಅಭ್ಯರ್ಥಿಯು ಯಾವುದೇ ಸರ್ಕಾರಿ ಉದ್ಯೋಗಿಯಾಗಿರಬಾರದು.

ಹೆಚ್ಚಿನ ಮಾಹಿತಿಗಾಗಿ ಕೊಪ್ಪಳ ಜಿಲ್ಲಾ ಅಲ್ಪಸಂಖ್ಯಾತರ ಕಛೇರಿ ಹಾಗೂ ತಾಲ್ಲೂಕು ಅಲ್ಪಸಂಖ್ಯಾತರ ಮಾಹಿತಿ ಕೇಂದ್ರ, ಕೊಪ್ಪಳ: 08539-225070, ಗಂಗಾವತಿ: 08533-230027, ಕುಷ್ಟಗಿ: 8880482486, ಯಲಬುರ್ಗಾ: 9620522537 ಗಳಿಗೆ ಸಂಪರ್ಕಿಸಬಹುದು ಎಂದು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

**"SIHI KAHI"** Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State